ಮುಂಜಾವು

ವಾರಪತ್ರಿಕೆ.

ಸಂಪಾದಕ: ಸಿರಿಮನೆ ನಾಗರಾಜ್

ರಿಜಿಸ್ಟರ್ಡ್ ನಂ. ಕೆಆರ್ಎನ್ಎಸ್ — ೧೯

ಸಂಪುಟ ೧ ಸಂಚಿಕೆ ೧೩ ಕೊಪ್ಪ ೪೧-೧೧-೮೨ ಭಾನುವಾರ ಬೆಲೆ ೪೦ ಪೈಸೆ

ನಮ್ಮ ಪತ್ರಿಕೆಯ ಕಚೇರಿ

ನಮ್ಮ ಪತ್ರಿಕೆಯ ಕಚೇರಿ ಹಾಗೂ ಅಚ್ಚುಕೂಟವನ್ನು ತಿಲಕ್ ರಸ್ತೆ (ಕಾಫಿ ಬೋರ್ಡ್ ಕಚೇರಿ ಇರುವ ರಸ್ತೆ) ಯ ೨೨ (೩) ನಂಬರಿನ ಮನೆಯಲ್ಲಿ ತೆರೆದಿದ್ದೇವೆ. (ಸಾರಿಪುತ್ತ ಟೆಕ್ಸ್‌ಟೈಲ್ಸ್ ಹಿಂಭಾಗ.) **ಸಂಪಾದಕರನ್ನು ಭೇಟಿ ಮಾಡುವ** ಸಮಯ: ಬೆಳಿಗ್ಗೆ ೧೧-೩೦ ರಿಂದ ಸಂಜೆ ೪-೦೦ ಗಂಟೆವರೆಗೆ ಮಾತ್ರ.

'ಮುಂಜಾವು' ಚಂದಾ ದರ: ಆಜೀವ ಚಂದಾ ೨೦೦ ರೂ
ವಾರ್ಷಿಕ ಚಂದಾ ೨೦ ರೂ; ಬಿಡಿ ಪ್ರತಿ ೪೦ ಪೈಸೆ

ನ.ರಾ.ಪುರ ಠಾಣಾಧಿಕಾರಿಯಿಂದ ಹಲ್ಲೆ ಆರೋಪ:

ನ್ಯಾಯಾಲಯಕ್ಕೆ ಡಾ|| ನಾಗರಾಜ್ ದೂರು

ನ.ರಾ.ಪುರ: ನ.೨ರಂದು ಇಲ್ಲಿನ ಪೋಲೀಸ್ ಠಾಣಾಧಿಕಾರಿ ಲಕ್ಷ್ಮಣ್ ಹಾಗೂ ಕೊಪ್ಪದ ಸ.ಇ. ನಾರಾಯಣ ಸ್ವಾಮಿ ಇಬ್ಬರೂ ತಮ್ಮನ್ನು ಅವಮಾನಕರವಾಗಿ ಥಳಿಸಿ, ಕೊಲೆಗೆ ಪ್ರಯತ್ನಿಸಿದ್ದಾರೆಂದು ಆರೋಪಿಸಿ ಮಡಬೂರಿನ ಡಾ|| ಹೆಚ್. ಜಿ.ನಾಗರಾಜ್ ನ.೧೨ರಂದು ಇಲ್ಲಿನ ಪ್ರಥಮ ದರ್ಜೆ ನ್ಯಾಯಾಧೀಶರಿಗೆ ದೂರೊಂದನ್ನು ಸಲ್ಲಿಸಿದ್ದಾರೆ.

ಈ ದೂರಿನ ಬಗ್ಗೆ ವಿಚಾರಣೆ ನಡೆಸಿ ನ.೩೦ ರೊಳಗೆ ವರದಿ ಸಲ್ಲಿಸುವಂತೆ ತರೀಕೆರೆಯ ಡಿವೈಎಸ್ಪಿಯವರಿಗೆ ನ್ಯಾಯಮೂರ್ತಿ ಬಸವರಾಜ ಪಾಟೀಲರು ಆದೇಶಿಸಿದ್ದಾರೆ.

ಅಕ್ರಮ ಬಂಧನ, ತೀವ್ರ ರೀತಿಯ ಪೆಟ್ಟಾಗುವಂತೆ ಹಲ್ಲೆ ಹಾಗೂ ಕೊಲೆ ಪ್ರಯತ್ನ ಎಂಬ ಮೂರು ಆಪಾದನೆಗಳನ್ನು ದೂರಿನಲ್ಲಿ ಮಾಡಲಾಗಿದೆ. ಅವರ ಪರವಾಗಿ ಇಲ್ಲಿನ ಎಲ್ಲ ವಕೀಲರೂ ವಕಾಲತ್ತು ವಹಿಸಿದ್ದಾರೆ.

ಶಿವಮೊಗ್ಗದ ಮೆಗ್ಗಾನ್ ಆಸ್ಪತ್ರೆಯ ತುರ್ತು ಚಿಕಿತ್ಸಾ ವಿಭಾಗದಲ್ಲಿ ಶುಶ್ರೂಷೆ ಪಡೆಯುತ್ತಿರುವ ನಾಗರಾಜ್‌ರನ್ನು ಇಂದು ಸ್ಟ್ರೆಚರ್ ಮೇಲೆ ಮಲಗಿಸಿ ಅಂಬುಲೆನ್ಸ್‌ನಲ್ಲಿ ಕರೆತರಲಾಗಿತ್ತು. ಈ ಪ್ರಕರಣ ಈಗ ನ.ರಾ.ಪುರ ಮತ್ತು ಸುತ್ತಮುತ್ತ ಬಹಳ ಕುತೂಹಲ ಹುಟ್ಟಿಸಿದ್ದು, ನ್ಯಾಯಾಲಯ ದೆದುರು ನಿಂತಿದ್ದ ಅಂಬುಲೆನ್ಸ್‌ನೊಳಗೆ ಹೋಗು–ಬರುವವರೆಲ್ಲ ಇಣಿಕಿ ನೋಡುತ್ತಿದ್ದುದು ಕಂಡುಬಂತು.

ಡಾ. ನಾಗರಾಜ್ ಹೇಳಿಕೆ

ತಮ್ಮ ಅಣ್ಣನ ಮಗ ಪ್ರಕಾಶ ಎಂಬವನ ಮೇಲೆ ಅ.೩೧ ರಂದು ಸುಂದರೇಶ, ಸಾಧು ಪೂಜಾರಿ ಮತ್ತಿತರರು ಹಲ್ಲೆ ನಡೆಸಿದ ದೂರನ್ನು ಕೊಟ್ಟಾಗ ಅವನನ್ನೇ ಲಕ್ಷ್ಮಣ್ ಥಳಿಸಿದ್ದು, ಆ ಬಗ್ಗೆ ವೈದ್ಯರ ಸರ್ಟಿಫಿಕೇಟ್ ಮಾಡಿಸಿದ್ದೇ ತಮ್ಮ ತಪ್ಪಾಗಿಸಿ ನ.೨ರಂದು ತಮ್ಮನ್ನು ಠಾಣೆಗೆ ಕರೆಸಿ ಬಾಯಿಗೆ ಬಂದಂತೆ ಬಯ್ಯುತ್ತ ಹೊಡೆದು, ಒದ್ದು ಲಾಕಪ್ಪಿಗೆ ಕೂಡಿದರು; ಅನಂತರ ಅಲ್ಲಿಗೆ ಬಂದ ಕೊಪ್ಪದ ಸ.ಇ.ನಾರಾಯಣ ಸ್ವಾಮಿ ಅವರೂ ಈ 'ಚಿತ್ರಹಿಂಸೆ'ಯನ್ನು ಮುಂದುವರಿಸಿದರು; ತಾನು ಜೀವ ಉಳಿಸಿಕೊಳ್ಳಲು ನ್ಯಾಯಾಧೀಶರ ಮನೆಗೆಂದು ಓಡಿದಾಗ ಅಟ್ಟಿಸಿಕೊಂಡು ಬಂದು ಹಿಡಿದ ಪೋಲಿಸರು ತನ್ನನ್ನು ಸಾರ್ವಜನಿಕರೆದುರು ಹೊತ್ತು ಠಾಣೆಗೆ ತಂದು ಕೋಳ ಹಾಕಿ ಪುನಃ ಹೊತ್ತುಕೊಂಡು ಆಸ್ಪತ್ರೆಗೆ ತಂದರು; ವೈದ್ಯರು ಪರೀಕ್ಷಿಸಿ ಆಸ್ಪತ್ರೆಗೆ ಸೇರಿಸಿಕೊಳ್ಳುತ್ತೇನೆಂದರೂ ಬಿಡದೆ ಪ್ರಥಮ ಚಿಕಿತ್ಸೆಯ ನಂತರ ತಮ್ಮ ವಶಕ್ಕೆ ತೆಗೆದುಕೊಂಡು ಪುನಃ ಹೊರಿಸಿಕೊಂಡು ಬಯ್ಯುತ್ತಾ ಹೊಡೆಯುತ್ತಾ ಠಾಣೆಗೊಯ್ದು ಕೂಡಿದರು; ಲಕ್ಷ್ಮಣ್ ತನ್ನನ್ನು ಶೂಟ್ ಮಾಡಿಬಿಡುವುದಾಗಿ ಪಿಸ್ತೂಲಿಗೆ ಕೈ ಹಾಕಿದಾಗ ಪಿಸಿಯೊಬ್ಬರು ತಡೆದು ಅವರನ್ನು ಹೊರಗೆ ಕರೆದುಕೊಂಡು ಹೋದರು; (ಇನ್ನೂ ಇದೆ)

'ಮುಂಜಾವು' ಸಂಪಾದಕರ ಮೇಲೆ ಕೈ ಮಾಡಲು ಯತ್ನ

ನ.ರಾ.ಪುರ: ಇಲ್ಲಿನ ಪೋಲೀಸ್ ಠಾಣೆಯಲ್ಲಿ ನ. ೨ರಂದು, ನಡೆದ ಘಟನೆಯ ಬಗ್ಗೆ ಹೆಚ್ಚಿನ ಮಾಹಿತಿ ಸಂಗ್ರಹಿಸಲು ನ. ೧೨ರಂದು 'ಮುಂಜಾವು' ಸಂಪಾದಕರು ಬಂದಿದ್ದಾಗ ಕೆಲವರು ಅವರಿಗೆ ಬೆದರಿಕೆ ಹಾಕಿ ಅವರಮೇಲೆ ಕೈಮಾಡಲು ಯತ್ನಿಸಿದರು.

(ವಿವರ ಮುಂದಿನ ಸಂಚಿಕೆಯಲ್ಲಿ)

ನ.ರಾ.ಪುರ: ಒಂದು ವರ್ಗದ ಜನ ಇಲ್ಲಿನ ಠಾಣಾಧಿಕಾರಿಯಿಂದ ತಮಗೆ ಅಪಮಾನವಾಗುತ್ತಿದೆಯೆಂದು ಅವರನ್ನು ವರ್ಗಾಯಿಸಲು ಒತ್ತಾಯಿಸುತ್ತಿದ್ದರೆ, ಅತೀ ಬಡವರ್ಗದ ಜನ ಲಕ್ಷ್ಮಣರನ್ನು ವರ್ಗ ಮಾಡಿದರೆ ಉಪವಾಸ ಸತ್ಯಾಗ್ರಹ ಮಾಡುವುದಾಗಿ ನ. ೫ರಂದು ಡಿವೈಎಸ್ಪಿಗೆ ತಿಳಿಸಿದ್ದಲ್ಲದೆ ನಿನ್ನೆ ಖುದ್ದು ಚಳುವಳಿ ಮಾಡಹೊರಟಿದ್ದ ಮುಖಂಡರು, ಪೋಲೀಸರು ತಡೆದರು.

ಶೃಂಗೇರಿ: ಅಡ್ಡಗದ್ದೆ ಸಮೀಪದ ಸಿಂದೊಳ್ಳಿ ಸುತ್ತಮುತ್ತ ಗಂಧದ ಕಳ್ಳಸಾಗಣೆಗೆ ಸಂಬಂಧ ಪಟ್ಟಂತೆ ಶೃಂಗೇರಿ ಠಾಣಾಧಿಕಾರಿ ರಮಾನಂದ ರೈ ಅವರು ನ. ೪ರಂದು ಇನ್ನೂ ಇಬ್ಬರನ್ನು ಬಂಧಿಸಿ ಅವರಿಂದ ೭ ಸಾವಿರ ರೂ. ಬೆಲೆಯ ಗಂಧ ವಶಪಡಿಸಿಕೊಂಡಿದ್ದಾರೆ.

ಪಂಚಲೋಹ ಗಣಪತಿ ವಿಗ್ರಹ ಕಳವು:

ಇನ್ನೂ ಇಬ್ಬರ ಬಂಧನ

ಕೊಪ್ಪ: ಬಂಡಿಗಡಿಯ ಮನೆಯೊಂದರಿಂದ ಕಳವಾಗಿದ್ದು ಈಚೆಗೆ ಪತ್ತೆಯಾಗಿದ್ದ ಅಮೂಲ್ಯ ಪಂಚಲೋಹ ಗಣಪತಿ ವಿಗ್ರಹದ ಕಳುವಿನ ಸಂಬಂಧ ಬೇಕಾಗಿದ್ದ, ಪ್ರಮುಖ ಆರೋಪಿಗಳೆನ್ನಲಾದ ಕೆ. ಎಂ. ಲಕ್ಷ್ಮೀನಾರಾಯಣ ಹೊಳ್ಳ ಮತ್ತು ಮಂಜುನಾಥಭಟ್ಟ ಎಂಬಿಬ್ಬರನ್ನು ಕೊಪ್ಪ ಪೋಲೀಸ್ ಸ.ಇ. ನಾರಾಯಣ ಸ್ವಾಮಿ, ಸಿಬ್ಬಂದಿ ತೀರ್ಥಹಳ್ಳಿ, ತಾ|| ಬಾಳಗಾರು ಎಂಬಲ್ಲಿ ಬಂಧಿಸಿ ನ. ೧೨ರಂದು ನ.ರಾ.ಪುರ ನ್ಯಾಯಾಧೀಶರೆದುರು ಹಾಜರ್ಪಡಿಸಿದ್ದರು. ಸರ್ಕಲ್ ಇನ್ಸ್‌ಪೆಕ್ಟರ್ ಟಿ.ಇ.ಹೊನ್ನಗಿರಿಯಯ್ಯ ತನಿಖೆ ಮುಂದುವರಿಸಿದ್ದಾರೆ.

ಈ ಹಿಂದೆ ಬಂಧಿತನಾಗಿದ್ದ ಜಯರಾಮ ಅ. ೨೭ರಂದು ಜೈಲಿಂದ ಪರಾರಿಯಾಗಿದ್ದಾನೆ

ಯುವಕ ಸಂಘ ಸ್ಥಾಪನೆ

ಕೊಪ್ಪ: ಕೂಲಿ ಕಾರ್ಮಿಕರೇ ಹೆಚ್ಚಾಗಿ ವಾಸಿಸುವ ಇಲ್ಲಿನ ಗುಣವಂತೆ ರಸ್ತೆ ಬಡಾವಣೆಯಲ್ಲಿ ಭಾಗ್ಯೋದಯ ಯುವಕ ಸಂಘದ ಉದ್ಘಾಟನೆಯನ್ನು ನ.೮ ರಂದು ತಾ.ಅ.ಮಂ. ಅಧ್ಯಕ್ಷ ಬಿ.ಜಿ.ಚಿದಂಬರ್ ನೆರವೇರಿಸಿದರು. ಹೆಚ್.ಜಿ.ಗೋವಿಂದ ಗೌಡರ ಅಧ್ಯಕ್ಷತೆಯಲ್ಲಿ ನಡೆದ ಸಮಾರಂಭದಲ್ಲಿ ಕೆ.ಬಾಲಣ್ಣ ಗೌಡ, ಎಂ.ಎಸ್. ಆಚಾರ್ಯ, ಜಿ.ಡಿ.ಪರಮೇಶ್ವರ ಮತ್ತು ಕೆ.ಕೆ.ದೇವಕಿ ಮುಖ್ಯ ಅತಿಥಿಗಳಾಗಿದ್ದರು.

ಕೆ.ಎಸ್.ಅರುಣಾಚಲ ಸ್ವಾಗತಿಸಿ, ಎ. ಉಮೇಶ್ ಮನವಿ ಅರ್ಪಿಸಿದರು. ಎಸ್. ಹರೀಶ್ ವಂದಿಸಿದರು.

ಡಿ.ರಘುಶೆಟ್ಟಿ ಅಧ್ಯಕ್ಷ ಹಾಗೂ ನಾರಾಯಣ ಕಾರ್ಯದರ್ಶಿಗಳಾಗಿರುವ ೧೭ ಜನರ ಕಾರ್ಯಕಾರಿ ಸಮಿತಿ ಹಾಗೂ ೧೦ ಜನರ ಸಲಹಾ ಸಮಿತಿ ರಚಿಸಲಾಯಿತು.

ಕ್ರಾಂತಿರಂಗ, ಜನತಾ ಪಕ್ಷಗಳ ಅಧ್ಯಕ್ಷತೆಗೆ ಆಯ್ಕೆ

ಚಿಕ್ಕಮಗಳೂರು: ಶೃಂಗೇರಿ ಕ್ಷೇತ್ರದ ಮೂರೂ ತಾ||ಗಳಿಗೆ ಅಧ್ಯಕ್ಷರನ್ನು ಜಿಲ್ಲಾ ಕ್ರಾಂತಿರಂಗದ ಅಧ್ಯಕ್ಷ ಬಿ.ಬಿ.ಶಂಕರ್ ನೇಮಿಸಿದ್ದಾರೆ. ಅವರೆಂದರೆ: ಎಂ.ಎಂ.ಚಂದ್ರಶೇಖರ್ (ಕೊಪ್ಪ), ಕೆ.ಎ.ಶ್ರೀನಿವಾಸ್ (ಶೃಂಗೇರಿ), ಹಾಗೂ ಹೆಚ್. ಎಸ್. ಕೃಷ್ಣಯ್ಯ.(ನ.ರಾ.ಪುರ)

ಜನತಾ ಪಕ್ಷದ ಶೃಂಗೇರಿ ತಾ|| ಘಟಕಕ್ಕೆ ಎ.ಎಂ.ಶ್ರೀಕಂಠಗೌಡ ಅಧ್ಯಕ್ಷರಾಗಿಯೂ, ನ.ರಾ.ಪುರ ತಾ|| ಘಟಕಕ್ಕೆ ಕೆ. ಎನ್. ರುದ್ರಪ್ಪ ಸಂಚಾಲಕರಾಗಿಯೂ ನೇಮಕವಾಗಿದ್ದು, ಮಾಗ ಚಂದ್ರಶೇಖರ್ ಶೃಂಗೇರಿ ವಿಧಾನ ಸಭಾ ಕ್ಷೇತ್ರದ ಅಧ್ಯಕ್ಷರಾಗಿ ಪುನಃ ಮುಂದುವರಿಯುತ್ತಾರೆ.

ಕೊಪ್ಪದಲ್ಲಿ ವಿರೋಧಿ ಸಮಾವೇಶ

ನ. ೧೫ರಂದು ಬೆ. ೧೧ಕ್ಕೆ ಕೊಪ್ಪದಲ್ಲಿ ಎಲ್ಲಾ ವಿರೋಧ ಪಕ್ಷಗಳ ಕಾರ್ಯಕರ್ತರ ಸಭೆಯನ್ನು ಕರೆಯಲಾಗಿದೆ.

ಕುಟುಂಬಯೋಜನೆ ಶಸ್ತ್ರ ಚಿಕಿತ್ಸೆ ಮಾಡಿಸಿಕೊಂಡವರಿಗೆ ಸ್ಟೀಲ್ ತಟ್ಟೆ ಉಡುಗೊರೆ

ಕೊಪ್ಪ: ಕೊಡಗಿಹಿತ್ಲುವಿನಲ್ಲಿ ನ.೪ರಂದು ನಡೆದ ಕುಟುಂಬಯೋಜನೆ ಶಸ್ತ್ರಚಿಕಿತ್ಸೆ ಶಿಬಿರದಲ್ಲಿ ಶಸ್ತ್ರ ಚಿಕಿತ್ಸೆ ಮಾಡಿಸಿಕೊಂಡವರಿಗೆ ಕೊಪ್ಪ ತಾ.ಅ.ಮಂ. ವತಿಯಿಂದ ೨೫ರೂ. ಬೆಲೆಯ ತಲಾ ಒಂದೊಂದು ಸ್ಟೀಲ್ ತಟ್ಟೆಗಳ ಉಡುಗೊರೆ ಕೊಡಲಾಗಿದೆ.

ಶಿಬಿರದಲ್ಲಿ ಶಸ್ತ್ರಚಿಕಿತ್ಸೆ ಮಾಡಿಸಿಕೊಂಡ ೨೧೪ ಜನರಲ್ಲಿ ೧೪೨ ಕೊಪ್ಪ, ೬೯ ಶೃಂಗೇರಿ ಮತ್ತು ಐವರು ನ.ರಾ.ಪುರ ತಾ|| ನವರಾಗಿದ್ದಾರೆಂದು ತಿಳಿದು ಬಂದಿದೆ.

ಉತ್ತಮೇಶ್ವರ ಆಸ್ಪತ್ರೆ ಈ ತಿಂಗಳಲ್ಲೇ

ಪ್ರಾರಂಭದ ಭರವಸೆ

ಕೊಪ್ಪ: ಉತ್ತಮೇಶ್ವರದಲ್ಲಿ ಈ ವರ್ಷ ಹೊಸದಾಗಿ ನಿರ್ಮಾಣವಾಗಿರುವ ಸರ್ಕಾರಿ ಪ್ರಾಥಮಿಕ ಆರೋಗ್ಯ ಘಟಕದ ಪ್ರಾರಂಭೋತ್ಸವ ಈ ತಿಂಗಳ ಕೊನೆಯೊಳಗೇ ನಡೆಯುವುದಾಗಿ ಆಸ್ಪತ್ರೆ ಸಮಿತಿಯ ಅಧ್ಯಕ್ಷರಾದ ಬಿ.ಜಿ.ಚಿದಂಬರ್ 'ಮುಂಜಾವು'ಗೆ ತಿಳಿಸಿದ್ದಾರೆ.

ನ. ೭ರ 'ಮುಂಜಾವು' ಪ್ರಕಟಿಸಿದ್ದ 'ಉತ್ತಮೇಶ್ವರ ಆಸ್ಪತ್ರೆ ಬಾಗಿಲು ತೆರೆದೀತೆ?' ಎಂಬ ವರದಿಗೆ ಉತ್ತರವಾಗಿ ಅವರು ಈ ರೀತಿ ತಿಳಿಸಿದ್ದಾರೆ.

"ಅಲ್ಲಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಯೋಜನೆಯಲ್ಲಿ ಇನ್ನೂ ಕೆಲವು ಕಟ್ಟಡಗಳು ನಿರ್ಮಾಣವಾಗುತ್ತಿದ್ದವು. ಒಂದು ಹಳ್ಳಿಯಲ್ಲಿ ಒಂದು ಸಮಾರಂಭ ನಡೆಸುವುದೇ ಕಷ್ಟವಾಗಿರುವಾಗ ಎಲ್ಲವನ್ನೂ ಒಟ್ಟಿಗೆ ಒಮ್ಮೆಗೇ ಮಂತ್ರಿಗಳು, ಮತ್ತಿತರ ಗಣ್ಯರನ್ನು ಕರೆಸಿ ಸಮಾರಂಭ ಏರ್ಪಡಿಸುವುದೆಂದು ಒಂದು ಉದ್ದೇಶವಾಗಿತ್ತು. ಆದ್ದರಿಂದ ತಡವಾಗಿದೆ" ಎಂದು ಚಿದಂಬರ್ ತಿಳಿಸಿದ್ದಾರೆ.

ಸಿ ನಿ ಮಾ

"ನನಗೆ ತೃಪ್ತಿ ನೀಡುವ ಪಾತ್ರಗಳು ಸಿಗುತ್ತಿಲ್ಲ"

—ರಾ ಮ ಕೃ ಷ್ಣ

ಸಂದರ್ಶನ: ಮಾ.ಶೇ.ಗಣಪತಿ

ಸದಾ ಸುದ್ದಿಯಲ್ಲಿರುವ ಈಚಿನ ಚಿತ್ರ ನಟರಲ್ಲೊಬ್ಬರಾದ ರಾಮಕೃಷ್ಣ ವಿನಯ ಶೀಲರು. ಅತ್ಯಂತ ಸರಳ ವ್ಯಕ್ತಿತ್ವ ಅವರದು. ಎಲ್ಲರೊಡನೆಯೂ ನಗುನಗುತ್ತಾ ಮಾತಾಡುವ ವಾಚಾಳಿ. 'ಗತ್ತು', "ಬಣ್ಣ ಜಂಬ" ಅವರಲ್ಲಿ ಕಾಣುವುದಿಲ್ಲ.

ಕೇವಲ ಇಪ್ಪತ್ತೇ ಚಿತ್ರಗಳಲ್ಲಿ ನಟಿಸಿದ್ದರೂ (೧೪ ಚಿತ್ರ ಬಿಡುಗಡೆಯಾಗಿವೆ. ಇದರಲ್ಲಿ ಒಂದು ತಮಿಳು ಚಿತ್ರವೂ ಸೇರಿದೆ) ಪ್ರೇಕ್ಷಕರ ಮೆಚ್ಚುಗೆಗೆ ಪಾತ್ರರಾಗಿರುವ ರಾಮಕೃಷ್ಣ "ಜಗ್ಗು" ಚಿತ್ರದ ಚಿತ್ರೀಕರಣಕ್ಕಾಗಿ ಇತರ ನಟರೊಡನೆ ಕೊಪ್ಪಕ್ಕೆ ಬಂದಾಗ ಅವರೊಡನೆ "ಎರಡು" ಮಾತನಾಡುವ ಮನಸಾಗಿ, ಅವರನ್ನು ಭೇಟಿಯಾಗಿ ಮಾತಿಗೆ ಕುಳಿತೆ —

ಚಲನ ಚಿತ್ರ ಇಂದಿನ ಸಮಾಜದಲ್ಲಿ ಜನತೆಯ ಮೇಲೆ ಯಾವರೀತಿ ಪ್ರಭಾವ ಬೀರುತ್ತಿದೆ?

"ಯಾವ ರೀತಿ ಪ್ರಭಾವ ಬೀರುತ್ತೆ ಎಂಬುದನ್ನು ನಾವು ಹೇಗೆ ಹೇಳೋಕಾಗುತ್ತೆ? ಮುಖ್ಯವಾಗಿ ಮನರಂಜನೆ ಜನತೆಗೆ ಸಿಗುತ್ತಿದೆ ಎನ್ನಬಹುದಷ್ಟೆ. ಅದರ ಪರಿಣಾಮ ಜನತೆಯ ಮೇಲೆ ಒಳ್ಳೆಯದೂ ಆಗಬಹುದು; ಕೆಟ್ಟದ್ದೂ ಆಗಬಹುದು."

ಯಾವ ರೀತಿಯ ಚಿತ್ರಗಳು ಇಂದಿನ ಸಮಾಜಕ್ಕೆ ಬೇಕೆನ್ನುವಿರಿ?

"ಜನತೆಯನ್ನು ತಿದ್ದುವ ಮೂಲಕ ಸಮಾಜದ ಉನ್ನತಿಗೆ ಚಿತ್ರಮಾಧ್ಯಮ ಅತಿ ಮುಖ್ಯ. ಆದ್ದರಿಂದ ಇಂದಿನ ಜನತೆಗೆ ಅದರಲ್ಲೂ ಇಂದಿನ ಯುವಕ-ಯುವತಿಯರಿಗೆ ಒಳ್ಳೆಯ ಶಿಕ್ಷಣ ಕೊಡುವಂತಹ ಚಿತ್ರ ಅಗತ್ಯ. ಜೊತೆಗೆ ಮನರಂಜನೆಯೂ ಮುಖ್ಯ."

ಇಂದು ಇಂತಹ ಚಿತ್ರಗಳು ತೀರ ಕಡಿಮೆಯೇನೋ? ಅನ್ನುವ ಶಂಕೆಯನ್ನು ನಾನು ವ್ಯಕ್ತಪಡಿಸಿದಾಗ "ನಿರ್ದೇಶಕರುಗಳು ಸಮಾಜವನ್ನು ತಿದ್ದುವ ಗುರಿಯೊಂದನ್ನೇ ಇಟ್ಟುಕೊಂಡಿದ್ದರೆ ಆಗುವುದಿಲ್ಲ. "ಲಾಸ್" ಆಗದಂತೆ ನೋಡಿಕೊಳ್ಳಬೇಕಷ್ಟೆ? ಇಂದಿನ ಹೆಚ್ಚಿನ ಚಿತ್ರರಸಿಕರು ಮೆಚ್ಚುವ "ಡಿಷ್ಕುಂ-ಡಿಷ್ಕುಂ" ಚಿತ್ರಗಳನ್ನೇ ತಯಾರಿಸಬೇಕಾಗಿದೆ." ಎಂದರು.

ನಿಮಗೆ ಸಿಗುತ್ತಿರುವ ಪಾತ್ರಗಳ ಬಗ್ಗೆ ನಿಮ್ಮ ಪ್ರತಿಕ್ರಿಯೆ ಅಥವಾ ಅಭಿಪ್ರಾಯವೇನು?

"ಇದುವರೆಗೆ ಸಿಕ್ಕಿರುವ ಯಾವ ಪಾತ್ರವೂ ನನಗೆ ತೃಪ್ತಿ ನೀಡಿಲ್ಲ. ನನ್ನ ಮನಸಿಗೆ ಹಿಡಿಸುವ ಪಾತ್ರಗಳು ಸಿಗದಿರುವುದು ನನ್ನ ದುರ್ದೈವ ಅಷ್ಟೆ."

ಇದಕ್ಕೆ ಕಾರಣ ಏನಿರಬಹುದು?

"ಚಿತ್ರ ರಂಗದಲ್ಲಿ "ಬೆಲೆಯಿರುವ", ಜನಪ್ರಿಯರೆನಿಸಿರುವ ನಟರನ್ನೇ ನಿರ್ದೇಶಕರು ಹಣಗಳಿಸುವ ದೃಷ್ಟಿಯಿಂದ ಆಯ್ಕೆ ಮಾಡಿಕೊಳ್ಳುತ್ತಾರೆ. ಆದ್ದರಿಂದ ನಮ್ಮಂತಹ ನಟರಿಗೆ ಪ್ರತಿಭೆಯನ್ನು ತೋರಿಸಿಕೊಳ್ಳುವ ಅವಕಾಶ ಸಿಗುತ್ತಿಲ್ಲ."

ಕನ್ನಡ ಚಳುವಳಿಯಲ್ಲಿ ಅನೇಕ ಚಿತ್ರನಟರು ಭಾಗವಹಿಸಿದ್ದರೂ ತಾವೇಕೆ ಭಾಗವಹಿಸಿಲ್ಲ?

"ಕನ್ನಡದ ಬಗ್ಗೆ ನನಗೆ ಅಭಿಮಾನವಿದೆ. ಆದರೆ ಇನ್ನೊಬ್ಬರಿಗೆ ಹೇಳುವ ತಾಕತ್ತು ನನಗಿಲ್ಲ. ಭಾಷಣ ಮಾಡಲೂ ನನಗೆ ಬರುವುದಿಲ್ಲ."

ಇನ್ನೂ ಅವರೊಡನೆ ಹರಟುವ ಆಸೆ ನನಗಿತ್ತಾದರೂ ಅವರು ಬೇರೆಡೆಗೆ ಚಿತ್ರೀಕರಣಕ್ಕಾಗಿ ಹೊರಟಿದ್ದರಿಂದ ಅವರ ಕಾರ್ಯಕ್ಕೆ ವಿಘ್ನತರುವ ಸಾಹಸಕ್ಕೆ ಕೈಹಾಕಲು ನಾನಿಷ್ಟಪಡಲಿಲ್ಲ.

"ಪ್ರಾಯ ಪ್ರಾಯ ಪ್ರಾಯ"ದ ಮೂಲಕ ಅಪಾರ ಜನಪ್ರಿಯರಾಗಿರುವ ರಾಮಕೃಷ್ಣ ಎಲ್ಲರೊಡನೆಯೂ ಮಾತನಾಡುತ್ತಲೇ ಇರಬಯಸುವ ಜನಪ್ರೇಮಿ. "ಚಿತ್ರರಂಗದಲ್ಲಿ ನಾನು ನನ್ನ ಯಶಸ್ಸನ್ನೇ ಕಂಡಿಲ್ಲ." ಎನ್ನುವ ಇವರ ಉತ್ತಮವಾದ ಅಭಿನಯ ಕಲೆಯನ್ನು ಚಿತ್ರರಂಗ ಹೇಗೆ ಉಪಯೋಗಿಸಿಕೊಳ್ಳುತ್ತದೆ ಎಂಬುದನ್ನು ಕಾದು ನೋಡಬೇಕು.

ಗ್ರಾಮಾಭಿವೃದ್ಧಿ ಯೋಜನೆಗಳ ಬಗ್ಗೆ ಕೆ.ಟಿ.ಚಿನ್ನಯ್ಯಗೌಡ ಹೇಳುತ್ತಾರೆ:

"ಈಗ ಕೆಲಸ ಮಾಡದವನೇ ಪಾಪಿ!"

ಇತ್ತೀಚೆಗೆ ಒಂದು ದಿನ ಬಾಳೆಹೊನ್ನೂರಲ್ಲಿ ಕೆ.ಟಿ.ಚಿನ್ನಯ್ಯ ಗೌಡರ ಹತ್ತಿರ ಸ್ವಲ್ಪ ಹೊತ್ತು ಬಿಡುವಾಗಿ ಮಾತಾಡುವ ಅವಕಾಶ ಸಿಕ್ಕಿತ್ತು. ಚಿನ್ನಯ್ಯ ಗೌಡರು ಬಾಳೆಹೊನ್ನೂರು ಪಂಚಾಯ್ತಿಗೆ, ನ.ರಾ.ಪುರ ತಾ.ಅ.ಮಂಡಳಿಗೆ ಅಧ್ಯಕ್ಷರು. ತಾಲ್ಲೂಕಿನ ಪ್ರತಿಷ್ಠಿತ ಕಾಂಗ್ರೆಸ್ ರಾಜಕಾರಣಿ. ನಮ್ಮ ಮಾತು ಖಾಸಗಿಯಾಗಿ, ಅನೌಪಚಾರಿಕವಾಗಿತ್ತಾದರೂ ಈ ಭಾಗದ ಇಂದಿನ ಸ್ಥಿತಿಗತಿಗಳನ್ನೇ ಕುರಿತದ್ದಾಗಿತ್ತಾದ್ದರಿಂದ ಸಂಭಾಷಣೆಯ ಮುಖ್ಯಾಂಶವನ್ನು ಇಲ್ಲಿ ಬರೆಯುತ್ತಿದ್ದೇನೆ.

ಬಾಳೆಹೊನ್ನೂರು ಪಂಚಾಯ್ತಿ ಬಸ್ ಸ್ಟಾಂಡಿನ ಬಲ ಭಾಗದಲ್ಲಿ .ರಾ.ಗ್ರಾ.ಉ. ಯೋಜನೆಯಿಂದ ಹೊಸದಾಗಿ ಕಟ್ಟಿಸಿರುವ ಸಾಲು ಮಳಿಗೆಗಳ ಮೂಲಕ ನಮ್ಮ ಮಾತು ತಾಲ್ಲೂಕಿನಲ್ಲಿ ಈ ಯೋಜನೆಯಡಿ ಕಟ್ಟಲಾಗುತ್ತಿರುವ ಕಟ್ಟಡಗಳ ಕಡೆ ಹೋಯಿತು. ಮಹಿಳಾ ಸಮಾಜ, ಯುವಕ-ಯುವತಿ ಮಂಡಳಿಗಳ ಕಟ್ಟಡಗಳು, ಶಾಲಾ ಕೊಠಡಿಗಳು, ರಂಗ ಮಂದಿರ, ಸಮುದಾಯ ಭವನ, ಹರಿಜನರಿಗಾಗಿ ಜ್ಞಾನಮಂದಿರ ಮುಂತಾದ ಅನೇಕ ಕಟ್ಟಡಗಳನ್ನು ಕಟ್ಟಿಸುತ್ತಿರುವುದಾಗಿ ಗೌಡರು ಹೇಳಿದರು.

"ಕೆಲಸ ಮಾಡಬೇಕೆನ್ನುವವರಿಗೆ ಈ ಎನ್ನಾರ್‌ಇಪಿ ಮತ್ತು ಐಆರ್‌ಡಿಪಿ ಯೋಜನೆಗಳು ಒಂದು ಅಕ್ಷಯ ಪಾತ್ರೆ ಇದ್ದಂತೆ. ಎಷ್ಟೂ ಕೆಲಸ ಮಾಡಿಸಬಹುದು. ನಿಜವಾಗಿ ಹೇಳಬೇಕೆಂದರೆ ಇವತ್ತು ಸರ್ಕಾರ ಎಷ್ಟು ಯೋಜನೆಗಳನ್ನು ಜಾರಿಗೆ ತಂದಿದೆ ಎಂದರೆ, ಆಡಳಿತ ಪಕ್ಷದಲ್ಲಿ ಈ ಮೂವತ್ತು ವರ್ಷದಲ್ಲಿ ಯಾವಾಗಲೂ ಕೆಲಸ ಮಾಡಲು ಇಷ್ಟು ಅವಕಾಶ ಸಿಕ್ಕಿರಲಿಲ್ಲ. ಇವತ್ತು ಕೆಲಸ ಮಾಡದವನು ಪಾಪಿ."

"ಅದು ಸರಿ. ಆದರೆ ಇಷ್ಟೊಂದು ಕಟ್ಟಡ ಕಟ್ಟಿಸಿಹಾಕುತ್ತಿದ್ದೀರಲ್ಲ. ಸಿಮೆಂಟಿಗೆ ಏನು ಮಾಡುತ್ತೀರಿ? ಸಿಮೆಂಟಿಲ್ಲದೆ ಕಟ್ಟಿಸಿದರೆ ಎಷ್ಟು ವರ್ಷ ಬಾಳಿಕೆ ಬರುತ್ತವೆ?"

"ನಮಗೆ ಸಿಮೆಂಟಿನ ತೊಂದರೆ ಅಷ್ಟೇನಿಲ್ಲ. ಮೊದಲಿಗೆ ಸ್ವಲ್ಪ ದಿನ ತೊಂದರೆ ಇತ್ತು. ಈಗೇನಿಲ್ಲ. ಸಿಮೆಂಟ್ ಹಾಕಿಯೇ ಕಟ್ಟುತ್ತಿದ್ದೇವೆ. ಹೋದವರ್ಷ ಸ್ವಲ್ಪ ಸಮಸ್ಯೆ ಇತ್ತು ಅಷ್ಟೆ."

"ಇದ್ದ ಸಿಮೆಂಟೆಲ್ಲ ತಗೊಂಡು ಹೋಗಿ ಬೆಂಗಳೂರಿಗೆ ಸುರೀತಿದ್ದಾರಲ್ಲ ಬಹುಮಹಡಿ ಕಟ್ಟಡಗಳಿಗೆ. ನೀವುಗಳು, ಸ್ಥಳೀಯ ಮುಖಂಡರು ಸ್ವಲ್ಪ ಸರ್ಕಾರಕ್ಕೆ ತಿದ್ದಿ ಹೇಳಬೇಕು."

"ಹಾಗೇನಿಲ್ಲ. ಇಲ್ಲಿಗೂ ಅಲಾಟ್‌ಮೆಂಟ್ ಕೊಟ್ಟಿರ್ತಾರೆ. ಏನೆಂದರೆ ಬಾಗಲಕೋಟೆಯಿಂದ ಕೊಡ್ತಾರೆ, ಅಷ್ಟೆ. ಇಲ್ಲಿನ ಡೀಲರ್‌ಗಳೇ ಈ ವರ್ಷ ನಾಲ್ಕೈದು ತಿಂಗಳು ಸಿಮೆಂಟ್ ತರಿಸದೆ ಒಂದಿಷ್ಟು ಕೊರತೆ ಉಂಟಾಗಿತ್ತು, ಅಷ್ಟೆ."

ನಮ್ಮ ಮಾತು ಪುನಃ ಯೋಜನೆಗಳ ಕಡೆ ಹೊರಳಿತು. ನಾನು ಹೇಳಿದೆ—"ಇಷ್ಟೊಂದು ಯೋಜನೆಗಳು ಗ್ರಾಮೀಣ ಪ್ರದೇಶದಲ್ಲಿ ಜಾರಿಗೆ ಬರ್ತವೆ. ಬೇರೆ ಬೇರೆ ಇಲಾಖೆಗಳೂ ಏನೇನೋ ಕಾರ್ಯಕ್ರಮ ನಡೆಸುತ್ತವೆ. ಆದರೆ ಎಲ್ಲಿ, ಯಾವ ಇಲಾಖೆಯಿಂದ ಏನು ಕಾರ್ಯಕ್ರಮ ನಡೀತಿದೆ ಅನ್ನುವುದು ಸ್ವತಃ ಗ್ರಾಮ ಪಂಚಾಯ್ತಿಯವರಿಗೇ ಗೊತ್ತಿರುವುದಿಲ್ಲ. ಅಲ್ಲದೆ ಒಂದು ಇಲಾಖೆಯ ಕಾರ್ಯಕ್ರಮಗಳಿಗೂ ಇನ್ನೊಂದರದಕ್ಕೂ — ಸಮನ್ವಯ ಅಂತಾರಲ್ಲ — ಅಂಥ ಒಂದು ಹೊಂದಾಣಿಕೆಯೇ ಇರುವುದಿಲ್ಲ. ಅದರ ಬದಲು ಎಲ್ಲ ಇಲಾಖೆಗಳ ಕಾರ್ಯಕ್ರಮಗಳ ಕಾರ್ಯನಿರ್ವಾಹಕ ಉಸ್ತುವಾರಿಯನ್ನು—ಆಡಳಿತಾತ್ಮಕ ಉಸ್ತುವಾರಿಯಲ್ಲ—ಪಂಚಾಯ್ತಿಗಳಿಗೆ ವಹಿಸಿದರೆ ಈ ಯೋಜನೆಗಳೆಲ್ಲ ಹೆಚ್ಚು ಅರ್ಥಪೂರ್ಣವಾಗಿ ಆಗಬಹುದೇನೋ ಅನ್ನಿಸುತ್ತಲ್ವ?"

"ನೀವು ಹೇಳುವುದೂ ನಿಜ. ಯಾರಿಗೆ ಏನು ಸವಲತ್ತು ಸಿಕ್ಕಿತು; ಅರ್ಹರಿಗೆ ಸಿಕ್ಕಿತೋ ಅನರ್ಹರಿಗೆ ಸಿಕ್ಕಿತೋ ಎಂಬುದೂ ಪಂಚಾಯ್ತಿಯವರಿಗೆ ಗೊತ್ತಾಗದೆ ಹೋಗುವುದುಂಟು. ಆದರೆ ವಾಸ್ತವವಾಗಿ ಕ್ಷೇತ್ರಾಭಿವೃದ್ಧಿ ಅಧಿಕಾರಿಗಳು ಇಂಥ ಸಮನ್ವಯ ಸಾಧಿಸಬೇಕು ಎಂಬುದು ಉದ್ದೇಶ. ಆದರೇನು ಮಾಡುವುದು? ಎಲ್ಲಿ ನೋಡಿದರೂ ಸಿಬ್ಬಂದಿ ಕೊರತೆ. ದಿನ ಬೆಳಗಾದರೆ ಇಪ್ಪತ್ತೆಂಟು ವರದಿ ಕಳಿಸಬೇಕು. ಒಬ್ಬ ಬಿಡಿಒ ಎಷ್ಟೆಲ್ಲ ನೋಡಿಕೊಂಡಾನು? ಇದು ಒಂದು ರೀತಿ ಸಮಸ್ಯೆಯೇ ಆಗಿದೆ."

"ಈ ಸಿಬ್ಬಂದಿಯ ಕೊರತೆಯ ಬಗ್ಗೆಯೂ ನೀವುಗಳು ಸರ್ಕಾರಕ್ಕೆ ಸ್ವಲ್ಪ ಒತ್ತಡ ತರಬೇಕೆಂದು ನನ್ನ ಅನಿಸಿಕೆ. ಎಲ್ಲಾ ಕಡೆ ಇದೇ ಕೊರತೆಯಾಗಿ ಹಳ್ಳಿಗರ ಕೆಲಸಗಳು ನಡೆಯುವುದೇ ಇಲ್ಲವಾಗಿದೆ. ನೇಮಕಾತಿ ಮಾಡ್ತಾರೆ. ಭ್ರಷ್ಟಾಚಾರ ಮಾಡಿರ್ತಾರೆ. ಯಾರೋ ಕೋರ್ಟಿಗೆ ಹೋಗಿ ತಡೆಯಾಜ್ಞೆ ತರ್ತಾರೆ. ಇದೆಲ್ಲ ಸ್ವಲ್ಪ ವ್ಯವಸ್ಥೆಯಾಗದಿದ್ದರೆ ನಿಮ್ಮ ಯೋಜನೆಗಳೆಲ್ಲ ನಿಷ್ಫಲವಾಗ್ತವೆ ನೋಡಿ."

ಹೌದೆಂದು ಚಿನ್ನಯ ಗೌಡರೂ ತಲೆಯಾಡಿಸಿದರು. ಆದರೆ ಯಾವುದೇ ಪರಿಹಾರ ಸೂಚಿಸುವ ಸ್ಥಿತಿಯಲ್ಲಿದ್ದಂತೆ ಕಾಣಲಿಲ್ಲ. ಇದೇ ಮಾತುಗಳನ್ನು ಹಿಂದೆ ಕೊಪ್ಪ ತಾ.ಅ.ಮಂ. ಅಧ್ಯಕ್ಷ ಚಿದಂಬರ ಗೌಡರಿಗೆ ಹೇಳಿದಾಗ ಅವರು, "ಅಯ್ಯೋ, ನಾವೆಲ್ಲ ಹೇಳಿದರೆ ಏನು ನಡೆಯುತ್ತೇರೀ. ಕಸುಬಿಲ್ಲ. ಅದರ ಬದಲು ಆದಷ್ಟು ಮಾಡ್ತಾಹೋಗುವುದು ಉತ್ತಮ" ಎಂದಿದ್ದರು. ಈಗ ಚಿನ್ನಯ್ಯಗೌಡರ ಅಭಿಪ್ರಾಯವೂ ಇದೇ ಇದ್ದಂತೆ ಕಂಡಿತು.

ಬಸ್ಸಿಗೆ ಸಮಯವಾಗುತ್ತಿತ್ತು.

ಬಾಳೆಹೊನ್ನೂರಿನ ಬಸ್ ಸ್ಟಾಂಡಿನಲ್ಲಿ ಹೊಸ ಅಂಗಡಿ ಮಳಿಗೆ ಸಾಲು ಕಟ್ಟಿಸಿದ್ದರಿಂದ ಹಳೆ ಅಂಗಡಿಗಳವರು ತಮ್ಮ ತಮ್ಮ

(೩ನೇ ಪುಟಕ್ಕೆ)

ಇಂಟಾನ್ ಬೀಜದ ಭತ್ತದ ಬಗ್ಗೆ ಮಾಹಿತಿ

ಚಿಕ್ಕಮಗಳೂರು: ಇಂಟಾನ್ ಭತ್ತಕ್ಕೆ ಬೆಂಕಿ ರೋಗವನ್ನು ತಡೆಯುವ ಶಕ್ತಿ ಇದ್ದಾಗ್ಯೂ ಸಹ ಜಿಲ್ಲೆಯಲ್ಲಿ ಕೆಲವೆಡೆ ಈ ಬೆಳೆಗೆ ಬೆಂಕಿ ರೋಗ ತಗುಲಿರುವುದಕ್ಕೆ, ರೈತರು ಬೀಜದ ಭತ್ತ ಶೇಖರಿಸುವಾಗ ರೋಗರಹಿತ ತಾಕುಗಳಿಂದ ತೆನೆಗಳನ್ನು ಆಯ್ದುಕೊಳ್ಳದಿರುವುದೇ ಕಾರಣವೆಂದು ಕೃಷಿ ಇಲಾಖೆ ಕಂಡುಹಿಡಿದಿದೆ.

ಆದ್ದರಿಂದ ರೋಗರಹಿತ ತೆನೆಗಳನ್ನೇ ಆರಿಸಿ ಶೇಖರಿಸುವುದಲ್ಲದೆ, ಕೃಷಿ ಇಲಾಖೆ ಸರಬರಾಜು ಮಾಡುವ ಮೂಲ ಬೀಜ ಮತ್ತು ರಾಜ್ಯ ಬೀಜ ನಿಗಮ ಒದಗಿಸುವ ದೃಢೀಕೃತ ಬೀಜ ಇವುಗಳನ್ನೇ ಬಳಸಿ ಬೆಂಕಿ ರೋಗದಿಂದ ತಪ್ಪಿಸಿಕೊಳ್ಳಬೇಕೆಂದೂ, ಈ ದಿಕ್ಕಿನಲ್ಲಿ ಇಲಾಖೆಯ ಸಿಬ್ಬಂದಿಯೊಡನೆ ಸಹಕರಿಸಬೇಕೆಂದೂ ಜಿಲ್ಲಾ ಕೃಷಿ ಇಲಾಖೆ ರೈತರನ್ನು ಕೋರಿದೆ.

ಓದುಗರ ಪತ್ರಗಳು

"ಧ್ವನಿವರ್ಧಕದ ಅರಚಾಟ ನಿಲ್ಲಿಸಿ ಪಾಠ ಕೇಳಲು ಬಿಡಿ"

ಸಮಸ್ಯೆಯ ಸರಪಳಿಯನ್ನೇ ಸುತ್ತಿಕೊಂಡಿರುವ ನಮಗೆ ಈ ಸರಪಳಿಯಿಂದ ಬಿಡುಗಡೆ ಎಂದೋ? ನಮಗರಿಯದು.

ಇದುವರೆಗೂ ಅಧ್ಯಾಪಕರ ಕೊರತೆಯ ಸಮಸ್ಯೆಯಿಂದ ತೊಂದರೆ ಅನುಭವಿಸಿದ ನಮಗೆ ಆ ಸಮಸ್ಯೆ "ಬಗೆಹರಿದಿದೆ". ಸರಿಯಾಗಿ ಪಾಠಮಾಡುವುದಕ್ಕೆ ಬರುತ್ತೋ ಇಲ್ಲವೋ – ಅಂತೂ ಉಪನ್ಯಾಸಕರನ್ನು ನಾವು ಪಡೆದಿದ್ದೇವೆ.

ಇನ್ನುಳಿದ ಸಮಸ್ಯೆಗಳಾದ ಸುಸಜ್ಜಿತ ಗ್ರಂಥಾಲಯ (ಈಗಿರುವ ಗ್ರಂಥಾಲಯದ ಕೀ ಕಳೆದುಹೋಗಿದೆಯೇನೋ!? ಬಾಗಿಲು ತೆರೆಯುವುದೇ ಇಲ್ಲ), ಪ್ರಯೋಗಾಲಯ, ವಿದ್ಯಾರ್ಥಿನಿಯರಿಗಾಗಿ ಮೂತ್ರಿಗಳು, ಆಟದ ಮೈದಾನ ಮುಂತಾದವುಗಳನ್ನು ನಮ್ಮಿಂದ ಕೇಳಿ ಕೇಳಿ ಸಂಪಾದಕರಾದ ನಿಮಗೂ, ನಿಮ್ಮ ಓದುಗರಿಗೂ ಬೇಸರವಾಗಿರಬಹುದು! ಈ ಸಮಸ್ಯೆಗಳ ಬಗ್ಗೆ ಇನ್ನೂ ಹೇಳಲು ನಾವು ಇಚ್ಛಿಸುವುದಿಲ್ಲ.

ಈಗ ಇನ್ನೊಂದು ಸಮಸ್ಯೆ: ನಮ್ಮ ವಿದ್ಯಾಭ್ಯಾಸಕ್ಕೆ ತೊಂದರೆ ಮಾಡಲು ನಾಡಿನ ನಾಯಕರು, ಆಡಳಿತ ವರ್ಗದವರ ಜೊತೆಗೆ ಇಲ್ಲಿನ ಚಿತ್ರ ಮಂದಿರದವರೂ ಸೇರಿಕೊಂಡಿದ್ದಾರೆ. ಮಧ್ಯಾಹ್ನ ಸುಮಾರು ಒಂದು ಗಂಟೆಯಿಂದ ಎರಡೂವರೆಯವರೆಗೆ ಜೋರಾಗಿ ಚಿತ್ರಗೀತೆಗಳನ್ನು ಕೂಗಿಸಿ ಉಪನ್ಯಾಸಕರಿಗೆ ಪಾಠಮಾಡುವುದಕ್ಕೂ, ನಮಗೆ ಪಾಠ ಕೇಳುವುದಕ್ಕೂ ತೀವ್ರ ತೊಂದರೆಯೊಡ್ಡಿದ್ದಾರೆ.

ಚಿತ್ರಮಂದಿರದಿಂದ ನಮ್ಮ ಕಾಲೇಜು ನೇರವಾಗಿರುವುದರಿಂದ ಹಾಗೂ ಧ್ವನಿವರ್ಧಕವನ್ನು ಸಿಕ್ಕಾಪಟ್ಟೆ ಜೋರಾಗಿ ಕೂಗಿಸುವುದರಿಂದ ಅದರ ಅರಚಾಟ ಅತಿಯಾಗಿ ಉಪನ್ಯಾಸಕರು ಕೂಗಿಕೊಂಡರೂ ನಮಗೆ ಕೇಳಿಸುವುದಿಲ್ಲ.

ಈ ಚಿತ್ರಗೀತೆಯೆಂಬ ಅರಚಾಟವನ್ನು ಚಿತ್ರಮಂದಿರದ ಮಾಲೀಕರು ಕಡಿಮೆ ಮಾಡಿ ನಮ್ಮ ವಿದ್ಯಾಭ್ಯಾಸಕ್ಕೆ ಅನುವು ಮಾಡಿಕೊಟ್ಟು ಸಹಕರಿಸಬೇಕೆಂದು ಕೇಳಿಕೊಳ್ಳುತ್ತೇವೆ. ಸಮಸ್ಯೆಗಳನ್ನು ಎದುರಿಸಿ ಎದುರಿಸಿ ಬಳಲಿ ಬೆಂಡಾಗುತ್ತಿರುವ ಕಿರಿಯ ಕಾಲೇಜು ವಿದ್ಯಾರ್ಥಿಗಳಾದ ನಮಗೆ ಉಪಕಾರ ಮಾಡಲು ನಿಮ್ಮಿಂದಾಗದಿದ್ದರೆ ಚಿಂತೆಯಿಲ್ಲ, ನಿಮ್ಮಿಂದ ಆಗುತ್ತಿರುವ ಈ ತೊಂದರೆಯನ್ನಾದರೂ ನಿಲ್ಲಿಸಿರೆಂದು ಚಿತ್ರ ಮಂದಿರದ ಮಾಲೀಕರಲ್ಲಿ ಮನವಿ ಮಾಡಿಕೊಳ್ಳುತ್ತಿದ್ದೇವೆ.

ಈ ಸಮಸ್ಯೆ ನಿವಾರಣೆಗೆ ಇದು ಮೊದಲ ಹೆಜ್ಜೆ. ಇದರಿಂದ ನಿವಾರಣೆಯಾಗದಿದ್ದರೆ ಎರಡನೆಯ ಹೆಜ್ಜೆ ಇಡಬೇಕಾದೀತು ಎಂದೂ ಎಚ್ಚರಿಸುತ್ತೇವೆ.

—'ಕಾವಿ', ಕಿರಿಯಕಾಲೇಜು, ಕೊಪ್ಪ.

ವಿಶ್ವ ಕನ್ನಡ ಮೇಳ

ಜನವರಿಯಲ್ಲಿ ಸರ್ಕಾರ ವಿಶ್ವಕನ್ನಡ ಸಮ್ಮೇಳನಕ್ಕೆ ಭರದ ಸಿದ್ಧತೆ ನಡೆಸುತ್ತಿದ್ದರೆ, ಇತ್ತಕಡೆ ಈ ಬರಗಾಲದಲ್ಲಿ, ಕನ್ನಡಕ್ಕೆ ತಕ್ಕ ಸ್ಥಾನ ದೊರೆಯದಿರುವ ಸ್ಥಿತಿಯಲ್ಲಿ, ಈ ಅದ್ದೂರಿಯ ವೆಚ್ಚದ ಸಮ್ಮೇಳನ ಅನವಶ್ಯಕವೆಂಬ ಭಾವನೆಗಳು ಪ್ರಕಟನಾಗುತ್ತಿವೆ. ಬರಗಾಲ ಪೀಡಿತ ಪ್ರದೇಶಕ್ಕೆ ತಕ್ಕ ಪರಿಹಾರ, ಕನ್ನಡಕ್ಕೆ ಮುಖ್ಯಸ್ಥಾನ ಒದಗಿಸಲೇ ಬೇಕಾದುದು ಸರ್ಕಾರದ ಆದ್ಯ ಕರ್ತವ್ಯ. ಈ ಕರ್ತವ್ಯದಲ್ಲಿ ಸರ್ಕಾರ ಗಮನವಿರಿಸಿಯೇ ಇದೆ ಎಂದು ವಾರ್ತಾ ಇಲಾಖೆಯ ಪ್ರಕಟಣೆಗಳು ಆಗಾಗ ತಿಳಿಸುತ್ತಿವೆ. ಇನ್ನು ಈ ಅದ್ದೂರಿಯ ಸಂಭ್ರಮಕ್ಕೆ ಇದು ಸಕಾಲವಲ್ಲ; ಇದು ಅನವಶ್ಯಕ; ಇದರಲ್ಲಿ ಯಾರೋ ಹಣ ಮಾಡಿಕೊಳ್ಳುತ್ತಾರೆ, ಎಂಬಿತ್ಯಾದಿ ಆಕ್ಷೇಪಣೆಗಳು ಒಂದು ರೀತಿಯಿಂದ ಸರಿ ಎಂದು ಕಂಡರೂ ಇನ್ನೊಂದು ರೀತಿಯಿಂದ ವಿಚಾರ ಮಾಡಿದರೆ ಈ ಸಮ್ಮೇಳನ ಈಗಲಾದರೂ ನಡೆಯುವುದು ಯುಕ್ತವೆಂದೇ ತೋರುತ್ತಿದೆ.

ಸಹಸ್ರಾರು ವರ್ಷಗಳಿಂದ ಇಂದಿನ ತನಕ ಕಲೆ, ವಿಜ್ಞಾನ ಇತ್ಯಾದಿಗಳಲ್ಲಿ ಆಯಾಯ ಕಾಲದ ಸರ್ಕಾರ ಅನೇಕ ಮಹಾ ಸಾಧನೆಗಳನ್ನು ನಿರ್ವಹಿಸಿಕೊಂಡು ಬಂದಿದ್ದು ಈ ಸಂದರ್ಭದಲ್ಲೆಲ್ಲ ದೇಶವು ಸಮಗ್ರವಾಗಿ ಸುಭಿಕ್ಷದಲ್ಲಿದ್ದಿತೆಂದಾಗಲೀ, ವಿಪುಲವಾದ ಹಣದ ಖರ್ಚು – ಶ್ರಮದ ದುಡಿಮೆಗಳಿಲ್ಲದೆಯೇ ಇವೆಲ್ಲ ಸಾಧಿಸಲ್ಪಟ್ಟಿವೆಯೆಂದಾಗಲೀ ಹೇಳುವುದು ತರ್ಕಬದ್ಧವೆನಿಸದು. ಆಯಾಯ ಕಾಲದ ಪ್ರಭುತ್ವ ಇಂತಹ ಕಾರ್ಯಗಳ ಬಗ್ಗೆ ಮೀನ–ಮೇಷ ಎಣಿಸುತ್ತಲೇ ಕಾಲ ತಳ್ಳಿದ್ದಿದ್ದರೆ ಇಂದು ನಮಗೆ ನೋಡುವುದಕ್ಕೆ ಏನು ಇರುತ್ತಿತ್ತು? ಇನ್ನು ಇದರಲ್ಲಿ ಯಾರೋ ಹಣಲಪಟಾಯಿಸುತ್ತಾರೆ ಎಂಬ ಆಕ್ಷೇಪಣೆ! ಈಗ ಲಪಟಾಯಿಸುವ ವಿಷಯ ಎಲ್ಲದರಲ್ಲಿಯೂ ಇದ್ದು ಇದೊಂದಕ್ಕೇ ಅದು ಸೀಮಿತವಾಗಿಲ್ಲವಷ್ಟೆ?

ಬೇರೆ ಸೋದರ ಭಾಷೆಗಳು ಈಗಾಗಲೇ ಕೆಲವು ಬಾರಿ ವಿಶ್ವ ಸಮ್ಮೇಳನ ನಡೆಸಿರುವಾಗ ಕನ್ನಡದ ವಿಶ್ವ ಸಮ್ಮೇಳನ ಈಗಲಾದರೂ ನಡೆಯುವುದು ಒಂದು ರೀತಿಯ ಸಂತೋಷವೇ ಸರಿ. ಒಂದು ವೇಳೆ ಈ ಸಮ್ಮೇಳನದ ಘೋಷಣೆಯಾದ ತರುಣದಲ್ಲಿಯೇ ಅದನ್ನು ಅತ್ಯುಗ್ರವಾಗಿ ಪ್ರತಿಭಟಿಸಿದ್ದರೆ ಸೂಕ್ತವಾಗಿತ್ತೇ ಹೊರತು ಸರ್ಕಾರ ಈ ದಿಶೆಯಲ್ಲಿ ಹಿಂದೆ ಬರಲಾರದಷ್ಟು ದೂರ ಮುನ್ನಡೆದಿರುವ ಈ ಹಂತದಲ್ಲಿ ಇದನ್ನು ವಿರೋಧಿಸುವುದು ಯಾವ ಸಾಧನೆಗಾಗಿ?

— ಹರಿಹರಪುರ ಬಿ.ಸುಬ್ರಹ್ಮಣ್ಯಂ
ಬೆಂಗಳೂರು

'ಕೆಲಸ ಮಾಡದವನೇ ಪಾಪಿ'

(೨ನೇ ಪುಟದಿಂದ)

ಜೀವನೋಪಾಯ ಕಳೆಕೊಳ್ಳದಂತೆ, ಅವರುಗಳಿಗೇ ಆ ಮಳಿಗೆಗಳು ಸಿಗುವಂತೆ ಪ್ರಯತ್ನಿಸಲು ಅವರಲ್ಲಿ ವಿನಂತಿಸಿದೆ. ಈ ಬಗ್ಗೆ ಅಂಗಡಿಗಳವರು ನನ್ನ ಹತ್ತಿರ ತಮ್ಮ ತಳಮಳ ತೋಡಿಕೊಂಡಿದ್ದನ್ನು ಹೇಳಿದೆ. "ಅವೆಲ್ಲ ಹರಾಜಾಗಬೇಕು ನೋಡಿ. ಆದರೂ ಅವರಿಗೆಲ್ಲ ಅನ್ಯಾಯವಾಗದಂತೆ ಪ್ರಯತ್ನಿಸುತ್ತೇನೆ" ಎಂದು ಭರವಸೆ ಕೊಟ್ಟರು.

ಸದ್ಯದಲ್ಲೇ ನಡೆಯಲಿದ್ದ ಬೇಗಾನೆಯವರ ಕಾರ್ಯಕ್ರಮವೊಂದಕ್ಕೆ ಗೌಡರಿಂದ ಆಹ್ವಾನ ಪಡೆದು ಬೀಳ್ಕೊಂಡೆ.

—ಸಿರಿಮನೆ ನಾಗರಾಜ್.

ತಾರ್ಕುಂಡೆಯವರ ಮೇಲಿನ ಪೋಲೀಸ್ ಹಲ್ಲೆಗೆ

ನ.ರಾ.ಪುರ ವಕೀಲರ ಪ್ರತಿಭಟನೆ

ನ.ರಾ.ಪುರ: ಅಖಿಲ ಭಾರತ ಬಾರ್ ಅಸೋಸಿಯೇಶನ್ನಿನ ಅಧ್ಯಕ್ಷರೂ, 'ನಾಗರಿಕ ಹಕ್ಕುಗಳ ರಕ್ಷಣೆಗಾಗಿ ಜನತೆಯ ಒಕ್ಕೂಟ' ಇದರ ಅಖಿಲ ಭಾರತ ಅಧ್ಯಕ್ಷರೂ ಆದ ವಿ.ಎಂ.ತಾರ್ಕುಂಡೆಯವರ ಮೇಲೆ ತಮಿಳು ನಾಡಿನ ಪೋಲೀಸರು ನಡೆಸಿದ ಹಲ್ಲೆಯನ್ನು ಪ್ರತಿಭಟಿಸಿ ಇಲ್ಲಿನ ವಕೀಲರು ನ. ೮ರಂದು ನ್ಯಾಯಾಲಯಕ್ಕೆ ಗೈರು ಹಾಜರಾಗಿದ್ದರೆಂದು ತಿಳಿದು ಬಂದಿದೆ.

ಆಂಧ್ರಪ್ರದೇಶದಲ್ಲಿ ೧೯೭೭ – ೭೭ರ ತುರ್ತುಪರಿಸ್ಥಿತಿಯ ಸಮಯದಲ್ಲಿ "ಸಮಾಜ ಘಾತಕರ ಜೊತೆ ಮುಖಾಮುಖಿ ಹೋರಾಟ" ಎಂಬ ಹೆಸರಲ್ಲಿ ಪೋಲಿಸರು ಕೊಂದ ಅಸಂಖ್ಯ ಬಡ ರೈತರ, ಕೂಲಿಕಾರರ ಕೊಲೆಗಳ ಬಗ್ಗೆ ಸ್ವತಂತ್ರ ವಿಚಾರಣೆ ನಡೆಸಲು ದಿ|| ಲೋಕನಾಯಕ ಜಯಪ್ರಕಾಶ ನಾರಾಯಣ್‌ರವರು ತಾರ್ಕುಂಡೆಯವರ ನೇತೃತ್ವದಲ್ಲಿ ವಿಚಾರಣಾ ಆಯೋಗವೊಂದನ್ನು ನೇಮಿಸಿದ್ದರು. ಆ ಸಮಿತಿ ಅಂಥ ಹತ್ತಾರು ಪ್ರಕರಣಗಳ ವಿಚಾರಣೆ ನಡೆಸಿ, ಅವೆಲ್ಲ ಭೂಮಾಲೀಕ ಪಾಳೇಗಾರೀ ರಾಕ್ಷಸರ ಹಿತ ರಕ್ಷಣೆಗಾಗಿ ಪೋಲೀಸರು ನಡೆಸಿದ ಹಸಿಹಸೀ ಕೊಲೆಗಳೆಂದು ಪತ್ತೆಮಾಡಿ ವರದಿ ಮಾಡಿದ್ದರು.

ತಾರ್ಕುಂಡೆಯವರು ಅ.೩ಗ ರಂದು ಮದುರೆಯಲ್ಲಿ ಒಕ್ಕೂಟ ಏರ್ಪಡಿಸಿದ್ದ ಶಾಂತಿಯುತ ಮೆರವಣಿಗೆಯನ್ನು ಉದ್ಘಾಟಿಸಲು ಬಂದಿದ್ದಾಗ ಪೋಲೀಸರು ಮೆರವಣಿಗೆಕಾರರ ಮೇಲೆರಗಿ ಅವರನ್ನೆಲ್ಲ ಚೆನ್ನಾಗಿ ಥಳಿಸಿ ವ್ಯಾನಿಗೆ ತುಂಬಿದರು. ಪೋಲೀಸರ ದೌರ್ಜನ್ಯಗಳನ್ನು ಪ್ರತಿಭಟಿಸಲೆಂದೇ ಈ ಮೆರವಣಿಗೆ ಏರ್ಪಡಿಸಲಾಗಿತ್ತು ಹಾಗೂ ಅದಕ್ಕೆ ಪೋಲೀಸರ ಅನುಮತಿಯನ್ನೂ ಪಡೆಯಲಾಗಿತ್ತು.

ತಮಿಳುನಾಡು, ಆಂಧ್ರ, ಬಿಹಾರ ಮುಂತಾದ ಹಲವು ರಾಜ್ಯಗಳಲ್ಲಿ ಗ್ರಾಮಾಂತರ ಪ್ರದೇಶಗಳಲ್ಲಿನ ಕಡು ಬಡತನ ಹಾಗೂ ಪಾಳೇಗಾರೀ ಪ್ರವೃತ್ತಿಯ ಭಾರಿ ಭೂಮಾಲೀಕರ ದಬ್ಬಾಳಿಕೆಗಳ ವಿರುದ್ಧ ಬಡ ರೈತರು, ಕೃಷಿ ಕೂಲಿಕಾರರು ಸಂಘಟಿತರಾಗುತ್ತಿದ್ದು, ಅವರುಗಳ ಮೇಲೆ ಪೋಲೀಸರು ಭೂಮಾಲೀಕರ ಕುಮ್ಮಕ್ಕಿನಿಂದ ದೌರ್ಜನ್ಯ ನಡೆಸುವುದು ಈಚಿನ ವರ್ಷಗಳಲ್ಲಿ ಹೆಚ್ಚುತ್ತಿರುವುದಾಗಿ ಪತ್ರಿಕಾ ವರದಿಗಳು ತಿಳಿಸುತ್ತವೆ. ಇಂಥ ದೌರ್ಜನ್ಯಗಳ ವಿರುದ್ಧ ಕೂಡ ಆ ರಾಜ್ಯಗಳಲ್ಲಿ ನಾಗರಿಕ ಹಕ್ಕುಗಳ ಒಕ್ಕೂಟದಂಥ ಸಂಘಟನೆಗಳು ಜನಾಭಿಪ್ರಾಯ ಮೂಡಿಸಲು ಯತ್ನಿಸುತ್ತಿವೆ. (ಈ ಒಕ್ಕೂಟದ ಕರ್ನಾಟಕ ಶಾಖೆಯ ಅಧ್ಯಕ್ಷರು 'ಕನ್ನಡ ಪ್ರಭ'ದ ಖಾದ್ರಿ ಶಾಮಣ್ಣ.)

ಜ್ಞಾನ ಮಂದಿರದ ಸ್ಥಳ ದಿಢೀರ್ 'ಬದಲಾವಣೆ: ಪಟ್ಟಭದ್ರರ ಕೈವಾಡ'

ಮಾನ್ಯರೆ.

ಸೆಮ್ಮಾರು ಗ್ರಾಮದ ಹೊಸಗೇರಿ ಎಂಬಲ್ಲಿಗೆ ಶೃಂಗೇರಿ ತಾಲೂಕ್ ಅಭಿವೃದ್ಧಿ ಮಂಡಳಿಯ ನಿರ್ಣಯದಂತೆ ಒಂದು ಜ್ಞಾನಮಂದಿರ ಮಂಜೂರಾಗಿರುತ್ತೆ. ಹೊಸಗೇರಿಯಲ್ಲಿ ಸುಮಾರು ೨೦ ಹರಿಜನರ ಮನೆಗಳು ಇದ್ದು ನೂರಕ್ಕೂ ಮಿಕ್ಕಿ ಜನಸಂಖ್ಯೆ ಇರುತ್ತದೆ. ಇಲ್ಲಿಯ ಹರಿಜನರು ತಾಲೂಕ್ ಅಭಿವೃದ್ಧಿ ಮಂಡಳಿ ಕೈಗೊಂಡ ನಿರ್ಣಯವನ್ನು ಸ್ವಾಗತಿಸಿದರು. ಜ್ಞಾನಮಂದಿರ ಕಟ್ಟಲು ಕಟ್ಟಡದ ತಳಪಾಯಕ್ಕಾಗಿ ಸೈಜುಗಲ್ಲುಗಳನ್ನು ಲಾರಿಗಳಲ್ಲಿ ತಂದುಹಾಕಲಾಯಿತು. ಆದರೆ ಪಟ್ಟಭದ್ರರ ಹಿತಾಸಕ್ತಿಯಿಂದ ಹರಿಜನರಿಗೆ ಅನುಕೂಲವಾಗಲಿದ್ದ ಈ ಜ್ಞಾನಮಂದಿರದ ಸ್ಥಳವನ್ನು ದಿಢೀರ್ ಸೆಮ್ಮಾರಿಗೆ ವರ್ಗಾಯಿಸಿ ಹರಿಜನರ ಹಾಗೂ ಬೇರೆಯವರ ಮನೆಗಳೂ ಇಲ್ಲದ ಪ್ರದೇಶದಲ್ಲಿ ಕಟ್ಟಲಾಗುತ್ತಿದೆ. ಇದನ್ನು ಪ್ರತಿಭಟಿಸಿ ಹೊಸಗೇರಿ ಮತ್ತು ಹತ್ತಿರದ ಊರುಗಳ ದಲಿತರು ಕ್ಷೇತ್ರಾಭಿವೃದ್ಧಿ ಅಧಿಕಾರಿಗಳಿಗೆ ಮತ್ತು ಚಿಕ್ಕಮಗಳೂರು ಜಿಲ್ಲಾಧಿಕಾರಿಗಳವರಿಗೆ ಪ್ರತಿಭಟನೆ ಸಲ್ಲಿಸಿದ್ದಾಗ್ಯೂ ಯಾವುದೇ ಪ್ರಯೋಜನವಾಗಿರುವುದಿಲ್ಲ.

ಯಾವ ಸಾರ್ವಜನಿಕರಿಗೂ ಪ್ರಯೋಜನವಿಲ್ಲದ ಪ್ರದೇಶದಲ್ಲಿ ಜ್ಞಾನಮಂದಿರ ನಿರ್ಮಾಣವಾಗುವುದು ಸರಿಯಲ್ಲವೆಂದೂ ಹಾಗೂ ಹಾಗಾಗದಂತೆ ತಡೆಯಬೇಕೆಂದೂ ಸರಕಾರದಲ್ಲಿ ಕೋರಿಕೊಳ್ಳುವ ಹಕ್ಕು ನಮಗಿಲ್ಲವೆ? ಹರಿಜನರ, ಹಿಂದುಳಿದವರ ಹೆಸರಿನಲ್ಲಿ ಮಂಜೂರಾಗುವ ಸವಲತ್ತುಗಳನ್ನು ಕೊಳ್ಳೆ ಹೊಡೆಯುತ್ತಿರುವುದನ್ನು ಅಧಿಕಾರಿಗಳು ನೋಡುತ್ತಾ ಕಣ್ಣುಮುಚ್ಚಿ ಕುಳಿತಿದ್ದಾರೆಯೇ?

ಮೇಲೆ ತಿಳಿಸಿರುವ ಜ್ಞಾನಮಂದಿರದ ಸ್ಥಳ ಬದಲಾವಣೆಯ ಬಗ್ಗೆ ಹತಾಶರಾಗಿರುವ ದಲಿತರಿಂದ ತೀವ್ರ ಸಂಘಟಿತ ಪ್ರತಿಭಟನೆಯನ್ನು ಸರ್ಕಾರ ಎದುರಿಸಬೇಕಾಗುವುದು ಖಚಿತ.

—ಕಾಳೆಪ್ಪ, ಹೊಸಗೇರಿ, ಸೆಮ್ಮಾರು.
(ಶೃಂಗೇರಿ ದಲಿತ ಸಂಘರ್ಷ ಸಮಿತಿ ಕಾರ್ಯಕರ್ತ.)

ಹೊಸದಿಲ್ಲಿ: ವಿಧಾನ ಸಭೆ ಹಾಗೂ ಸಂಸತ್‌ನ ಸದಸ್ಯರಿಗೆ ಕನಿಷ್ಠ ವಿದ್ಯಾರ್ಹತೆ ನಿಗದಿಗೊಳಿಸುವ ಉದ್ದೇಶದಿಂದ ಚುನಾವಣಾ ಕಾಯಿದೆಯ ತಿದ್ದುಪಡಿ ಮಾಡುವ ಯೋಜನೆ ಸರ್ಕಾರಕ್ಕಿಲ್ಲ ಎಂದು ಕೇಂದ್ರ ಕಾನೂನು ಸಚಿವ ಜಗನ್ನಾಥ ಕೌಶಲ್ ತಿಳಿಸಿದ್ದಾರೆ.

ಕಿರಿಯ ಕಾಲೇಜಿನಲ್ಲಿ ಕೃಷಿ ಪಾಠ

ಕೊಪ್ಪ: ಇಲ್ಲಿನ ಸರ್ಕಾರಿ ಕಿರಿಯ ಕಾಲೇಜಿನಲ್ಲಿ ನ.೧೦ರಂದು ಮಧ್ಯಾಹ್ನ ಇಲ್ಲಿನ ವಿದ್ಯಾರ್ಥಿ ಕೃಷಿಕ ಸಂಘದವರು ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ಸಹಾಯಕ ಕೃಷಿ ನಿರ್ದೇಶಕ ಎಂ. ಎಸ್. ಸುಬ್ಬೇಗೌಡರು ವಿದ್ಯಾರ್ಥಿಗಳಿಗೆ ಕೃಷಿಯ ಬಗ್ಗೆ ಬೋಧಿಸಿದರು.

ಭತ್ತದ ಬೀಜ ಸಂಗ್ರಹಣೆಯ ಬಗ್ಗೆ ವಿವರಿಸಿದ ಸುಬ್ಬೇಗೌಡರು ಭತ್ತದ ಕೃಷಿಯಲ್ಲಿ ಬೀಜಕ್ಕೆ ಹೆಚ್ಚಿನ ಗಮನ ಕೊಡಬೇಕೆಂದು ಒತ್ತಿ ಹೇಳಿದರು.

ಕಾರ್ಯಕ್ರಮದಲ್ಲಿ ಎಸ್.ಎಸ್.ವಿಶ್ವೇಶ್ವರ ಸ್ವಾಗತಿಸಿದರು.

ಅಖಿಲ ಭಾರತ ವಿದ್ಯಾರ್ಥಿ ಫೆಡರೇಶನ್ ಆಶ್ರಯದ ಪ್ರಬಂಧ ಸ್ಪರ್ಧೆ ಫಲಿತಾಂಶ

ಚಿಕ್ಕಮಗಳೂರು: ಅಖಿಲ ಭಾರತ ವಿದ್ಯಾರ್ಥಿ ಫೆಡರೇಷನ್ನಿನ ಜಿಲ್ಲಾ ಮಂಡಳಿಯು ಹಿರಿಯ ಸಂಸದೀಯ ಪಟು ದಿವಂಗತ ಭೂಪೇಶಗುಪ್ತ ಸ್ಮರಣಾರ್ಥ ಪ್ರೌಢಶಾಲೆ/ಜೂನಿಯರ್ ಕಾಲೇಜು ವಿದ್ಯಾರ್ಥಿಗಳಿಗೆ ಏರ್ಪಡಿಸಿದ್ದ ಪ್ರಬಂಧ ಸ್ಪರ್ಧೆಯ ಫಲಿತಾಂಶವನ್ನು ಈ ಕೆಳಗಿನಂತೆ ಇದೆ ಎಂದು ತಿಳಿಸಲು ಸಂತೋಷಪಡುತ್ತೇವೆ.

ಜೂನಿಯರ್ ಕಾಲೇಜ್ ವಿಭಾಗದ ಸ್ಪರ್ಧೆಯ ಫಲಿತಾಂಶ:– ಪ್ರಥಮ ಬಹುಮಾನ:ಕಂ.ಕ. ಕೃಷ್ಣಮೂರ್ತಿ, ದ್ವಿತೀಯ ಪಿ.ಯು.ಸಿ., ಕೊಪ್ಪ. ದ್ವಿತೀಯ ಬಹುಮಾನ ಖಾದರ್‌ಬಾಷಸಾಬ್, ದ್ವಿತೀಯ ಪಿ.ಯು.ಸಿ. ಕೊಪ್ಪ. ಕೆ.ಎ.ರಘುಪತಿ, ಬಾಳೆಹೊನ್ನೂರು. ತೃತೀಯ ಬಹುಮಾನ ಎಚ್. ವಿ. ತಿಮ್ಮೇಗೌಡ, ಪ್ರಥಮ ಪಿ.ಯು.ಸಿ., ಮೂಡಿಗೆರೆ. ಸಮಾಧಾನಕರ ಬಹುಮಾನ ಬಿ.ವಿ.ಹರಿಶ್ಯಾಮ, ದ್ವಿತೀಯ ಪಿ.ಯು.ಸಿ ಎನ್.ಆರ್.ಪುರ ರಮಾನಂದ ದ್ವಿತೀಯ ಪಿ.ಯು.ಸಿ. ಕೊಪ್ಪ

ಪ್ರೌಢಶಾಲೆ ವಿಭಾಗದ ಫಲಿತಾಂಶ: – ಪ್ರಥಮ ಬಹುಮಾನ ಎಸ್.ವೀಣಾ, ೧೦'ಬಿ' ಶೃಂಗೇರಿ. ದ್ವಿತೀಯ ಬಹುಮಾನ ಎ.ಎಂ. ಸುರೇಖ, ೯ನೇ ತರಗತಿ ಎಂ.ಇ.ಎಸ್. ಬಾಲಿಕಾ ಶಾಲೆ ಚಿಕ್ಕಮಗಳೂರು. ತೃತೀಯ ಬಹುಮಾನ ಟಿ.ಪಿ.ಸ್ವರ್ಣಲತಾ,೮ನೇ ತರಗತಿ ಸಂತ ಜೋಸೆಫ್ ಬಾಲಿಕಾ ಶಾಲೆ ಚಿಕ್ಕಮಗಳೂರು. ಸಮಾಧಾನಕರ: ಎ.ಸಿ. ಮೀನಾ ೮ನೇ ತರಗತಿ, ಆಶಾ ಕಾಮತ್ ಎಂ. ಇ. ಎಸ್. ಶಾಲೆ, ಚಿಕ್ಕಮಗಳೂರು ಡಿ.ಆರ್.ಸುಧಾಮಣಿ ೧೦ನೇ ತರಗತಿ ಭುವನೇಶ್ವರಿ ಶಾಲೆ, ಚಿಕ್ಕಮಗಳೂರು. ಎಸ್. ಕುಸುಮ ೮ನೇ ತರಗತಿ, ಸಂತ ಜೋಸೆಫ್ ಶಾಲೆ ಚಿಕ್ಕಮಗಳೂರು. ಬಿ.ಆರ್.ಲತಾ ೯ನೇ ತರಗತಿ, ಎನ್.ಆರ್.ಪುರ. ಎನ್. ಎಂ.ಶೈಲಜ, ೧೦ನೇ ತರಗತಿ ಎಸ್.ಶ್ರೀದೇವಿ. ೧೦ಸಿ, ಆಲಿಸ್ ಪೆರೇರಾ ಬಾಳೆಹೊನ್ನೂರು. ಕೆ.ಪ್ರಸನ್ನ[illegible]ಡಿ, ಟಿ.ಕೆ.ರಾಜೇಂದ್ರ [illegible] ಶೃಂಗೇರಿ.

ನಾಟಾ ವಶ

ಶಾನುವಳ್ಳಿ: ಇಲ್ಲಿಗೆ ಸಮೀಪದ ಕೆಸಗೋಡಿನಲ್ಲಿ ನ.೭ರಂದು ಅಕ್ರಮವಾಗಿ ಕೊಯ್ದಿಟ್ಟಿದ್ದ ೨೮ ಘನ ಅಡಿಗಳಷ್ಟು ಹೊಟ್ಟಾಲೆ ನಾಟಾವನ್ನು ಇಲ್ಲಿನ ಅರಣ್ಯ ರಕ್ಷಕ ಭದ್ರಯ್ಯ ಅವರು ಪತ್ತೆಹಚ್ಚಿ ಇಲಾಖೆಯ ವಶಕ್ಕೊಪ್ಪಿಸಿದ್ದಾರೆ. ಅಪರಾಧಿಗಳು ಯಾರೆಂದು ಪತ್ತೆಯಾಗಿಲ್ಲ.

ಮಕ್ಕಳದಿನಾಚರಣೆಅಂಗವಾಗಿ ಪ್ರಬಂಧ ಸ್ಪರ್ಧೆ

ಚಿಕ್ಕಮಗಳೂರು: ಮಕ್ಕಳ ದಿನಾಚರಣೆ ಅಂಗವಾಗಿ ಈ ಕೆಳಗಿನ ವಿಷಯಗಳಲ್ಲಿ ಯಾವುದಾದರೊಂದನ್ನು ಆರಿಸಿ ೧೦ ಪುಟಗಳಿಗೆ ಕಡಿಮೆ ಇರದಂತೆ (ಸುಮಾರು ೧೫೦೦ ಶಬ್ದಗಳು) ಪ್ರಬಂಧ ಬರೆದು ಜಿಲ್ಲಾ ಸ್ಕೌಟ್ಸ್ ಮತ್ತು ಗೈಡ್ಸ್ ಕಚೇರಿ, ಚಿಕ್ಕಮಗಳೂರು – ಈವಿಳಾಸಕ್ಕೆ ನವೆಂಬರ ೨೦ರ ಒಳಗೆ ಕಳುಹಿಸಿ ಕೊಡತಕ್ಕದ್ದು. ಇದಕ್ಕೆ ಸಂಬಂಧಪಟ್ಟ ಯಾವುದೇ ಪುಸ್ತಕಗಳ ಆಧಾರದ ಸಹಾಯದಿಂದ ಬರೆಯಬಹುದೆಂದೂ ಉತ್ತಮವಾದ ಎರಡು ಪ್ರಬಂಧಗಳಿಗೆ ಪ್ರಥಮ ಮತ್ತು ದ್ವಿತೀಯ ಬಹುಮಾನಗಳನ್ನು ನೀಡಲಾಗುವುದೆಂದು ರಾಜ್ಯ ಸಹಸಂಘಟನಾ ಕಮಿಷನರ್ (ಸ್ಕೌಟ್ಸ್) ಎ.ರಾಜಗೋಪಾಲ ರಾವ್ ತಿಳಿಸಿರುವರು.

ವಿಷಯಗಳು:- ಸ್ವಾತಂತ್ರ್ಯ ಸಂಗ್ರಾಮದಲ್ಲಿ ನೆಹರೂರವರ ಪಾತ್ರ; ೨. ಜವಾಹರಲಾಲ್ ನೆಹರೂರವರ ಸಂಕ್ಷಿಪ್ತ ಜೀವನ ಚರಿತ್ರೆ; ೩. ನಾನು ಮೆಚ್ಚಿದ ನೆಹರೂರವರ ವಿಖ್ಯಾತ ಕೃತಿಗಳು (ಯಾವುದಾದರೊಂದು–ಭಾರತ ದರ್ಶನ, ಆತ್ಮ ಚರಿತ್ರೆ, ಪ್ರಪಂಚದ ಚರಿತ್ರೆಯ ಇಣುಕು ನೋಟಗಳು.)

ಕುಟುಂಬ ಯೋಜನೆ ಶಸ್ತ್ರಚಿಕಿತ್ಸೆಯಲ್ಲಿ ಉದರದರ್ಶಕ ಶಸ್ತ್ರಚಿಕಿತ್ಸಾ ವಿಧಾನ ಜನಪ್ರಿಯವಾಗುತ್ತಿರುವುದರಿಂದ ಯಂತ್ರದ ಕೊರತೆ ಉಂಟಾಗದಿರಲೆಂದು ಪ್ರತಿ ಜಿಲ್ಲೆಗೊಂದು ಲ್ಯಾಪ್ರೋಸ್ಕೋಪಿಕ್ ಯಂತ್ರ ಒದಗಿಸುವ ತೀರ್ಮಾನ ಕೈಗೊಳ್ಳಲಾಗಿದೆಯೆಂದು ಬೇಗಾನೆ ರಾಮಯ್ಯ ತಿಳಿಸಿದ್ದಾರೆ.

ನ.ರಾ.ಪುರದಲ್ಲಿ ನ.೨೧ಕ್ಕೆ ಜಿಲ್ಲಾ ಕವಿ ಗೋಷ್ಠಿ

ನ.ರಾ.ಪುರ: ಚಿಕ್ಕಮಗಳೂರು ಜಿಲ್ಲಾ ಲೇಖಕರ ಸಂಘದ ಆಶ್ರಯದಲ್ಲಿ ಕನ್ನಡ ರಾಜ್ಯೋತ್ಸವದ ಅಂಗವಾಗಿ ನ.೨೧ ರಂದು ಇಲ್ಲಿ ಜಿಲ್ಲಾ ಕವಿ ಗೋಷ್ಠಿ ಏರ್ಪಾಡಾಗಿದೆ.

ಖ್ಯಾತ ಬಂಡಾಯ ಲೇಖಕಿ ಶ್ರೀಮತಿ ಬಿ.ಟಿ.ಲಲಿತಾ ನಾಯಕ ಅವರ ಅಧ್ಯಕ್ಷತೆಯಲ್ಲಿ ನಡೆಯುವ ಈ ಕವಿಗೋಷ್ಠಿಯನ್ನು 'ತುಮಕೂರು ವಾರ್ತೆ' ಸಂಪಾದಕರೂ, ಜಿಲ್ಲಾ ಲೇಖಕರ ಸಂಘದ ಹಿಂದಿನ ಅಧ್ಯಕ್ಷರೂ ಆದ ಹೆಚ್.ಎಸ್.ರಾಮಣ್ಣ ಉದ್ಘಾಟಿಸುವರು. ಖ್ಯಾತ ಬಂಡಾಯ ಸಾಹಿತಿ ಬರಗೂರು ರಾಮಚಂದ್ರಪ್ಪ ಹಾಗೂ ಪ್ರಸಿದ್ಧ ಕಾದಂಬರಿಕಾರ ನಾ.ಡಿಸೋಜ ಮುಖ್ಯ ಅತಿಥಿಗಳಾಗಿರುತ್ತಾರೆ.

ನೌಕರರ ಸಭೆ

ಕೊಪ್ಪ: ಇಲ್ಲಿನ ರಾಜ್ಯಸರ್ಕಾರಿ ನೌಕರರ ಸಂಘದ ತಾಲ್ಲೂಕು ಶಾಖೆಯ ಸಭೆ ೨೧-೧೧-೮೨ ರಂದು ನಡೆಯಲಿರುವುದಾಗಿ ಸಂಘದ ಪ್ರಕಟಣೆ ತಿಳಿಸಿದೆ. ಸಭೆ ನಡೆಯುವ ಸ್ಥಳ: ಕೊಪ್ಪ ಕಿರಿಯ ಕಾಲೇಜು.

ರಾಜ್ಯೋತ್ಸವ

ಬಾಳೆಹೊನ್ನೂರಲ್ಲಿ

ಕನ್ನಡ ರಾಜ್ಯೋತ್ಸವದ ದಿನ ಬೆಳಿಗ್ಗೆ ನಡೆದ ಕನ್ನಡ ಭುವನೇಶ್ವರಿಯ ವರ್ಣರಂಜಿತ ಮೆರವಣಿಗೆಯಲ್ಲಿ ವಿವಿಧ ಸ್ತಬ್ಧ ಚಿತ್ರಗಳಲ್ಲದೆ,ವಿವಿಧ ಜಾನಪದ ವಾದ್ಯ, ಕೋಲಾಟಗಳು ಇದ್ದವು.

ಕಿರಿಯ ಕಾಲೇಜಿನಲ್ಲಿ ನಡೆದ ಸಮಾರಂಭದ ಅಧ್ಯಕ್ಷತೆಯನ್ನು ಎ. ಸಿ. ದುಗ್ಗಪ್ಪ ನಾಯ್ಕ ವಹಿಸಿದ್ದರು. ಜಿಲ್ಲಾ ಕ.ಸಾ.ಪ. ಕಾರ್ಯದರ್ಶಿ ಎ.ಎಂ ಬಸವೇಗೌಡ ಮುಖ್ಯ ಅತಿಥಿಗಳಾಗಿದ್ದರು. 'ಶಿರೋರತ್ನ' ಸಂಪಾದಕ ಎಸ್. ಜಿ. ಕೃಷ್ಣಮೂರ್ತಿಯವರ ಸಂಚಾಲಕತ್ವದಲ್ಲಿ ನಡೆದ ಕವಿ–ಬರಹಗಾರರ ಗೋಷ್ಠಿಯಲ್ಲಿ ತಾ||ನ ೧೮ ಜನ ಭಾಗವಹಿಸಿದ್ದರು.

ಪ್ರಿನ್ಸಿಪಾಲ್ ಕೆ. ಜಿ. ಕೃಷ್ಣೇಗೌಡ ಸ್ವಾಗತಿಸಿದರು. ಕ.ಸಾ.ಪ. ಸದಸ್ಯ ಶ್ರೀನಿವಾಸಮೂರ್ತಿ ವಂದಿಸಿದರು.

ಇದೇ ಸಂದರ್ಭದಲ್ಲಿ ಜನಪದ ಕಲಾವಿದರಾದ ತೆಕ್ಕಟ್ಟೆ ಸುಬ್ರಾಯಾಚಾರ್ಯ, ಮುತ್ತಿನಕೊಪ್ಪ ಕೃಷ್ಣಶೆಟ್ಟಿ, ಸೀತಾನದಿ ಕೃಷ್ಣಯ್ಯ ಶೆಟ್ಟಿ (ಮರಣೋತ್ತರ), ಕೂಡಿಗೆ ಚೆಲ್ಲಪ್ಪಗೌಡ ಮತ್ತು ಇಟ್ಟಿಗೆ ಕೃಷ್ಣಮೂರ್ತಿ ಕಾರಂತರನ್ನು ಸನ್ಮಾನಿಸಲಾಯಿತು.

ಹೆದ್ಸೆಯಲ್ಲಿ

ಬೆಳವಿನಕೊಡಿಗೆ ಗ್ರಾಮ ಪಂಚಾಯ್ತಿ, ಉತ್ತಮೇಶ್ವರ, ಬೆಳವಿನಕೊಡಿಗೆ ಮಹಿಳಾ ಸಮಾಜ ಮತ್ತು ಯುವಕ ಸಂಘಗಳು, ಪ್ರಾಥಮಿಕ ಶಾಲೆಗಳು, ಒಟ್ಟಿಗೆ ಇಲ್ಲಿನ ಹನುಮಾನ್ ಯುವಕಸಂಘದ ಆಶ್ರಯದಲ್ಲಿ ಕನ್ನಡ ರಾಜ್ಯೋತ್ಸವವನ್ನು ಅದ್ದೂರಿಯಾಗಿ ಆಚರಿಸಲಾಯಿತು.

ಬೆಳಿಗ್ಗೆ ಕನ್ನಡ ರಾಜೇಶ್ವರಿಯ ಮೆರವಣಿಗೆಯ ನಂತರ ನಡೆದ ಕಾರ್ಯಕ್ರಮವನ್ನು ಎಂ.ಕೆ.ಶ್ರೀನಿವಾಸ್ ಉದ್ಘಾಟಿಸಿದರು. ವಿ.ರಾಮರಾವ್ ಸ್ವಾಗತಿಸಿದರು. ಹೆಚ್. ಆರ್.ಶೀನಣ್ಣ ಗೌಡ ಮುಖ್ಯ ಅತಿಥಿಗಳಾಗಿದ್ದರು. ಗ್ರಾಮಾಂತರ ಸ್ಪರ್ಧೆಗಳಿಗಾಗಿ ಸಾಂಸ್ಕೃತಿಕ ಕಾರ್ಯಕ್ರಮದ ನಂತರ,ಅಧ್ಯಕ್ಷತೆ ವಹಿಸಿದ್ದ ಎ.ಎಸ್.ಕಾಳಪ್ಪ ಹೆಗ್ಡೆ ಮಾತನಾಡಿದರು.

ಸಂಜೆ ಗ್ರಾಮಪಂಚಾಯ್ತಿ ಅಧ್ಯಕ್ಷ ಹೆಚ್.ಎಸ್.ಚಿನ್ನಯ್ಯನವರ ಅಧ್ಯಕ್ಷತೆಯ ಸಮಾರಂಭದಲ್ಲಿ ಕೆ.ಕೆ.ಯಜ್ಞನಾರಾಯಣ ಮತ್ತು ಹೆಚ್.ವಿ.ಪ್ರಭಾಕರ ಮುಖ್ಯ ಅತಿಥಿಗಳಾಗಿದ್ದರು. ಡಾ|| ಯು.ಎಸ್.ಯೋಗಪ್ಪ ಸಾಂಸ್ಕೃತಿಕ ಸ್ಪರ್ಧೆಗಳಲ್ಲಿ ಗೆದ್ದವರಿಗೆ ಬಹುಮಾನ ಹಂಚಿದರು. ಜಯಪುರ ಪಂ|| ಅಧ್ಯಕ್ಷ ಎ.ಸಿ.ವಿಜಯಪ್ಪ ಸಮಾರೋಪ ಭಾಷಣ ಮಾಡಿದರು. ಎ.ಸಿ.ಕೃಷ್ಣಪ್ಪ ವಂದಿಸಿದರು.

ಮೇಲುಬಿಲರೆ ಸುತ್ತಮುತ್ತ ಕೋಳಿ ಕಳವು

ಮೇಲುಬಿಲರೆ: ಇಲ್ಲಿನ ಸುತ್ತ ಮುತ್ತಲ ಹಳ್ಳಿಗಳಾದ ಕುಪ್ಪಳ್ಳಿ, ದಾಸನಕೊಡಿಗೆ ಮುಂತಾದ ಹಳ್ಳಿಗಳಲ್ಲಿ ಇತ್ತೀಚೆಗೆ ಕೋಳಿಗಳು ಕಾಣೆಯಾಗುತ್ತಿರುವ ಘಟನೆಗಳು ಹೆಚ್ಚುತ್ತಿವೆ.

ಒಂದು ಅಂದಾಜಿನ ಪ್ರಕಾರ ಸುಮಾರು ೫೦ ರಿಂದ ೬೦ ಕೋಳಿಗಳು ಇದುವರೆಗೂ ಕಾಣೆಯಾಗಿವೆ. ಬಡ ರೈತಾಪಿ ಜನರೇ ಹೆಚ್ಚಾಗಿ ಕೋಳಿ ಸಾಕಾಣಿಕೆದಾರರಾಗಿರುವುದರಿಂದ ಇವರೆಲ್ಲ ಈಗ ಕಂಗಾಲಾಗಿದ್ದಾರೆ.

ಸಮೀಪದ ಹರಿಹರಪುರದ ಕೆಲ ವರ್ತಕರಿಗೆ ಕೋಳಿಗಳು ಮಾರಾಟವಾಗಿದ್ದುದು ಗೊತ್ತಾಗಿದೆ. ಈ ಕೋಳಿಗಳನ್ನು ಮಾರುವ ಗಿರಿಜಮ್ಮ ಎಂಬ ಹೆಂಗಸು ಮತ್ತು ಆಕೆಯ ಮಕ್ಕಳೇ ಕೋಳಿ ಕಳ್ಳರೆಂದು ಶಂಕಿಸಲಾಗಿದೆ.

ಈ ಬಗ್ಗೆ ಕೊಪ್ಪ ಪೋಲೀಸರಿಗೆ ದೂರು ನೀಡಲಾಗಿದೆಯೆಂದೂ, ಅದರಿಂದ ಏನೂ ಪ್ರಯೋಜನವಾಗಿಲ್ಲವೆಂದೂ ಕೆಲ ಜನ ಹೇಳಿದ್ದಾರೆ.

ಸಂಬಂಧಪಟ್ಟವರು ಈ ಬಗ್ಗೆ ಕೂಡಲೇ ಗಮನ ಹರಿಸಬೇಕಾಗಿದೆ.

ಉದ್ಯೋಗ ವಾರ್ತೆ

ಕೆನರಾ ಬ್ಯಾಂಕಿನಲ್ಲಿ ೨೦೫, ಬ್ಯಾಂಕ್ ಆಫ್ ಇಂಡಿಯಾದಲ್ಲಿ ೩೫೦ ಮತ್ತು ಪಂಜಾಬ್ ನ್ಯಾಷನಲ್ ಬ್ಯಾಂಕಿನಲ್ಲಿ ೨೦೫ ಆಫೀಸರ್ ಹುದ್ದೆಗಳು ಖಾಲಿಯಿದ್ದು, 17-11-82ರೊಳಗಾಗಿ ಪದವೀಧರರಾದವರು ಅರ್ಜಿ ಸಲ್ಲಿಸ ಬಹುದಾಗಿದೆ.

ಕಂದಾಯ ಇಲಾಖೆಯಲ್ಲಿ ೧೫ ಅಸಿಸ್ಟೆಂಟ್ ಕಮಿಷನರ್ ಹುದ್ದೆಗಳು, ೩೦ ತಹಸೀಲ್ದಾರ್ ಹುದ್ದೆಗಳು, ಸಹಕಾರ ಇಲಾಖೆಯಲ್ಲಿ ೨೦ ಆಫ್ ಕೋ ಆಫ್ ಸರ್ವಿಸ್ ಹುದ್ದೆಗಳು, ಸ್ಟೇಟ್ ಅಕೌಂಟ್ಸ್‌ನಲ್ಲಿ ೨ ಅ|| ಕಂಟ್ರೋಲರ್ ಹುದ್ದೆಗಳು ಖಾಲಿಯಿದ್ದು, ಪದವೀಧರರಾದವರು 20-11-82 ರೊಳಗಾಗಿ ಅರ್ಜಿ ಸಲ್ಲಿಸಬಹುದು.

ಹೆಚ್ಚಿನ ವಿವರ ಬಯಸುವವರು ಡೈರೆಕ್ಟರ್ ಆಫ್ ಸ್ಟೂಡೆಂಟ್ ಇನ್‌ಫರ್ಮೇಷನ್ ಅಂಡ್ ಗೈಡೆನ್ಸ್ ಬ್ಯೂರೋ, ನೆಹರೂ ರಸ್ತೆ, ಶಿವಮೊಗ್ಗ–ಇವರಲ್ಲಿ ಸೂಕ್ತ ಅಂಚೆ ಚೀಟಿ ಇಟ್ಟು ಪಡೆಯಬಹುದಾಗಿದೆ.

ಹನುಮಾನ್ ಯುವಕ ಸಂಘದವರಿಂದ ನಾಟಕ ಮತ್ತು ಕೊಂಡ್ಲಿ[illegible] ಸುಬ್ಬಣ್ಣನವರಿಂದ ಜನಪದ ಹಾಡುಗಳನ್ನು ಏರ್ಪಡಿಸಲಾಗಿತ್ತು.

(ವರದಿ: ಕೆ.ಸುರೇಶ್ ಕುಮಾರ್.)

ಸಂಪಾದಕ, ಮುದ್ರಕ ಮತ್ತು ಪ್ರಕಾಶಕ: **ಸಿರಿಮನೆ ನಾಗರಾಜ್.**
ಅಚ್ಚು: ದೀವಟಿಗೆ ಅಚ್ಚುಕೂಟ, ಕೊಪ್ಪ

'ಮುಂಜಾವು'
ಚಂದಾ ದರ: ಆಜೀವ ಚಂದಾ ೨೦೦ರೂ; ವಾರ್ಷಿಕ ಚಂದಾ ೨೦ರೂ;